ಮಹಾಜ್ಯೋತಿ ಮಹಾವೀರ

[ಐತಿಹಾಸಿಕ ನಾಟಕ]

ವೈ. ವಿ. ಪಾರ್ಶ್ವನಾಥ

1965

ಮಹಾಜ್ಯೋತಿ ಮಹಾವೀರ–ಹೂ 2

ಪ್ರಥಮ ಮುದ್ರಣ
ಡಿಸೆಂಬರ್ 1965

ಬೆಲೆ: 0–75

ಮುದ್ರಕರು—
ಶ್ರೀ ಎಂ. ಮುನಿಯಪ್ಪ
ಶ್ರೀ ದುರ್ಗಾದೇವಿ ಪವರ್ ಪ್ರೆಸ್
ಕಲಾಸಿಪಾಳ್ಯಂ
ಬೆಂಗಳೂರು–2

ಮಹಾಜ್ಯೋತಿ ಮಹಾವೀರ

(ಐತಿಹಾಸಿಕ ನಾಟಕ)

ಬರೆದವರು :

ವೈ. ವಿ. ಪಾರ್ಶ್ವನಾಥ

1965

ಪ್ರಕಾಶಕರು :
ಶ್ರೀಮತಿ ಕೆ. ಪಿ. ನಿರ್ಮಲಾದೇವಿ
ಚನ್ನಪಟ್ಟಣ, ಬೆಂಗಳೂರು.

ಬೆಲೆ ರೂ. 0-75

ಮೊದಲನೆಯ ಮುದ್ರಣ
ಡಿಸೆಂಬರ್ ೧೯೬೪

ಮುದ್ರಕರು :
ಶ್ರೀ ಎಂ. ಮುನಿಯಪ್ಪ
ಪ್ರೊ: ಶ್ರೀ ದುರ್ಗಾದೇವಿ ಪವರ್ ಪ್ರೆಸ್,
ಕಲಾಸಿಪಾಳ್ಯಂ, ಬೆಂಗಳೂರು-೨.

ಪುಸ್ತಕ ಸಿಗುವ ಸ್ಥಳಗಳು

ಶ್ರೀ ವೈ. ವಿ. ಪಾರ್ಶ್ವನಾಥ
5ನೇ ಕ್ರಾಸ್
ಎಕ್ಸ್‌ಟೆನ್‌ಷನ್,
ಚನ್ನಪಟ್ಟಣ.

ಪದ್ಮಾಂಬ ಕಲಾಮಂಡಲಿ
ಎಂ. ಹೆಚ್. ಷಾ ಬಿಲ್ಡಿಂಗ್
ಲಾಲ್‌ಬಾಗ್‌ರೋಡ್,
ಬೆಂಗಳೂರು-2.

[**ವಿ. ಸೂ:** —ಈ ನಾಟಕವನ್ನಾಡಬಯಸುವ ಕಲಾಪ್ರೇಮಿಗಳು ಮೊದಲು ಲೇಖಕರ ಸಮ್ಮತಿ ದೊರಕಿಸಿಕೊಂಡು, ತಮ್ಮ ಶಕ್ತ್ಯಾನುಸಾರ 'ಪದ್ಮಾಂಬ ಕಲಾಮಂಡಳಿ'ಗೂ ಕಾಣಿಕೆ ಸಲ್ಲಿಸಬೇಕಾಗಿ ಬಿನ್ನಹ].

ಅರ್ಪಣೆ

" ಕವಿದೇವ ರತ್ನಾಕರ " ಮತ್ತು " ಮಹಾಜ್ಯೋತಿ ಮಹಾವೀರ " ಈ ಎರಡು ಗ್ರಂಥಗಳು ಅಚ್ಚಾಗಿ ಹೊರಬರಲು ಉದಾರವಾಗಿ ಧನ ಸಹಾಯ ಮಾಡಿದ

ಮಾನ್ಯ ಶಾಂತಪ್ಪ ಮಿರ್ಜಿ, ಚಿಕ್ಕೋಡಿ ಅವರಿಗೆ

ಅನಂತ ವಂದನೆಗಳನ್ನು ಸಲ್ಲಿಸಬೇಕಾದ್ದು ನನ್ನ ಕರ್ತವ್ಯ.

ಶ್ರೀಯುತರು - ಜಿನಧರ್ಮದಲ್ಲಿ ಅತ್ಯಂತ ಶ್ರದ್ಧೆಯುಳ್ಳವರು ಹೇಗೋ ಹಾಗೆಯೇ - ಜಿನಸಾಹಿತ್ಯದಲ್ಲಿಯೂ ಅಪೂರ್ವ ಅನುರಾಗವುಳ್ಳವರಾಗಿದ್ದಾರೆ. ಇವರು ಧನ ಸಹಾಯಮಾಡಿದ ನಿಮಿತ್ತ ಕೃತಜ್ಞತೆ ಸಲ್ಲಿಸಲು ಬರೆಯಬೇಕಾದ ಲೇಖನವಿದಲ್ಲ—ಅವರ ಕಾಗದ ಪತ್ರಗಳ ವ್ಯವಹಾರವನ್ನು ಗಮನಿಸಿ ಅವರ ನಿರ್ದಿಷ್ಟ ಬಯಕೆಯನ್ನು ಅಳತೆಗೋಲಿನಲ್ಲಿ ಕಣ್ಮನಗಳಿಂದ ಅಳೆದು ಈ ಅಭಿಪ್ರಾಯ ಬರೆಯಬೇಕಾಯಿತು. ಅವರ ಭಾವ ಚಿತ್ರವನ್ನು ಪ್ರಕಟಿಸಬೇಕೆಂದು ಎಷ್ಟೋಬಾರಿ ಅವರನ್ನು ಒತ್ತಾಯ ಪಡಿಸಿದರೂ, ಇರಬೇಕಾದ ಕರ್ತವ್ಯ ಪ್ರಜ್ಞೆಗೆ ಭಾವ ಚಿತ್ರವನ್ನು ಇಂಬುಗೊಡಿಸುವುದು—ಎಷ್ಟು ಮಾತ್ರಕ್ಕೂ ಸಲ್ಲದು ಎಂದು ಉತ್ತರಿಸಿ ಅವರ ವಿಚಾರವಾಗಿ ಏನೊಂದು ಬರೆಯಬಾರದೆಂದು ಆಗ್ರಹದಿಂದಲೇ ಸೂಚಿಸಿದ್ದರೂ-ಅವರ ಮತ್ತು ನನ್ನ ಈ ವ್ಯವಹಾರವನ್ನು ನನ್ನ ಅಭಿಮಾನಿ ವಾಚಕರಿಗೆ ತಿಳಿಯಪಡಿಸಲೇಬೇಕೆಂದು ವೈಯಕ್ತಿಕ ನಿರ್ಧಾರವನ್ನು ತಳೆಯಬೇಕಾಯ್ತು—ಶ್ರೀಯುತರ ಧರ್ಮ ಸಾಹಿತ್ಯ—ದಾನ ಇವುಗಳ ಮೇಲಿನ ಅಚಲ ವಿಶ್ವಾಸವು—ಅವರ ಶ್ರೇಯೋಭಿವೃದ್ಧಿಗೂ ಇಹಪರಕ್ಕೂ ಮಹಾ ಸೋಪಾನದಂತಿರುವುವು' ಈ ವಿಚಾರ ಅವರಿಗೆ ತಿಳಿದಷ್ಟು ನನಗೂ ತಿಳಿದಿಲ್ಲವೆಂದು ನನಗೆ ಹೇಳಲು ಹೃದಯ ತುಂಬಿಬರುತ್ತದೆ. ಹೆಚ್ಚು ಹೇಳುವುದು ಉಪಯುಕ್ತವಿಲ್ಲ— ಕರ್ತವ್ಯ ಪ್ರಜ್ಞೆಯ ಬಗ್ಗೆ ಚಿಂತಿಸುವವರ ಮಹಾ ಪಂಕ್ತಿಯಲ್ಲಿ ಸೇರಿದ ಶ್ರೀಯುತರಿಗೆ ಅನನ್ಯ ಸುಖಶಾಂತಿಗಳನ್ನು ಜಿನೇಂದ್ರನು ಕರುಣಿಸಿ-ಇನ್ನು ಜೈನ ಸಾಹಿತ್ಯವು—ವಿಚಾರಶೀಲ ಸಾಹಿತ್ಯವು ಅವರಿಂದ ಪ್ರಕಟವಾಗಲು ಸಾಕಷ್ಟು ಶಕ್ತಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ವೈ. ವಿ. ಪಾರ್ಶ್ವನಾಥ

ಎರಡು ಮಾತು

ಧರ್ಮ ಬಂಧುಗಳೇ,

"**ಮಹಾಜ್ಯೋತಿ ಮಹಾವೀರ**" ಈ ನಾಟಕ ಕೃತಿಯು ನನ್ನ ಎರಡನೆ ಗ್ರಂಥವಾಗಿದೆ. ಮೊದಲನೆಯದು—"ಬಾಹ್ಯಾಂತರ್ಯ"—ಇದನ್ನು ಶ್ರೇಷ್ಠ ನ್ಯಾಯಾಧೀಶರಾದ ಮಾನ್ಯ - ತುಕ್ಕೋಳ್ ಅವರು ಉದ್ಘಾಟಿಸಿ ಬಹುವಾಗಿ ಮೆಚ್ಚಿಕೊಂಡು ಹಿತೋಕ್ತಿಗಳನ್ನಾಡಿ–ಹರಿಸಿದರು–ಹಾಗೂ–ಅನೇಕ ಅಭಿಮಾನಿಗಳು–ಹಿರಿಯರೂ, ವಿದ್ವಾಂಸರೂ ಆದರದಿಂದ ಬರಮಾಡಿಕೊಂಡು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ, ಪ್ರೋತ್ಸಾಹವನ್ನಿತ್ತರು. ಇದಕ್ಕಾಗಿ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈಗ "**ಮಹಾಜ್ಯೋತಿ ಮಹಾವೀರ**" ಮತ್ತು "**ಕವಿದೇವ ರತ್ನಾಕರ**" ಇವೆರಡು ನಾಟಕಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಸದ್ಯದಲ್ಲಿಯೇ "ತ್ಯಾಗವೀರ ಬಾಹುಬಲಿ" "ಪದ್ಮಾವತಿ ಪರೀಕ್ಷೆ" ಎಂಬೆರಡು ನಾಟಕಗಳನ್ನು ಪ್ರಕಟಿಸುವ ನಿರ್ಧಾರವಾಗಿದೆ. ಹಾಗೆಯೇ ಅಲ್ಪಕಾಲದಲ್ಲಿಯೇ "ಶ್ರೀ ಪಾರ್ಶ್ವನಾಥ ವಚನ" ಎಂಬ ೧೦೦ಂಲ ವಚನಗಳುಳ್ಳ-ನನ್ನ ಸಾಹಿತ್ಯ ಸಂಕೇತಕ್ಕೆ ಧೃವತಾರೆಯಂತಿರುವ ಈ ವಚನ ಗ್ರಂಥವನ್ನು ತಮ್ಮ ಮುಂದಿಟ್ಟು "ಮಹಾಯಕ್ಷೆ ಪದ್ಮಾವತಿ ಅಥವಾ ರಾಜಾ ಜಿನದತ್ತರಾಯ," "ವಿಧಿಯ ವಿಜ್ಞಾನ" ಈ ಎರಡು ಕಾದಂಬರಿಗಳನ್ನು ಪ್ರಕಟಗೊಳಿಸುತ್ತೇನೆ. ನಂತರ ಬರೆದು ಸಿದ್ಧವಾಗಿರುವ ನಾಲ್ಕಾರು ಗ್ರಂಥಗಳ ಬಗ್ಗೆ ತೀರ್ಮಾನಿಸಿ ಪ್ರಕಟಣೆ ಮಾಡುತ್ತೇನೆ. ಎಲ್ಲದಕ್ಕೂ ಆರ್ಥಿಕ ಕೊರತೆಯೇ ಪ್ರಧಾನವಸ್ತು—ಹೇಗಾದರಾಗಲಿ ಮಾಡಿಯೇ ತೀರಬೇಕೆಂಬ ಉತ್ಸುಕತೆಯಿಂದಿರುತ್ತೇನೆ. ಈ ಉತ್ಸುಕತೆಗೆ ನೀವೇ ಕಾರಣರು; ನಿಮ್ಮೆಲ್ಲರ ಅಭಿಮಾನವೇ ತಳಹದಿ.

ಈ ನಾಟಕ ಗ್ರಂಥಗಳು ಅತ್ಯಲ್ಪ ಕಾಲದಲ್ಲಿ ಹೊರಬರಲು ಸಹಕರಿಸಿದ " ಶ್ರೀ ದುರ್ಗಾದೇವಿ ಪ್ರೆಸ್ " ಮಾಲೀಕರಾದ ಶ್ರೀ ಎಂ. ಮುನಿಯಪ್ಪನವರಿಗೆ ಅನೇಕ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಶ್ರೀಯುತರು ವ್ಯವಹಾರದೊಂದಿಗೆ ನೈಜಸಾಹಿತ್ಯ ಪ್ರಕಟಣೆಯಲ್ಲಿ, ವಿಚಾರಶೀಲ ಸಾಹಿತ್ಯದಲ್ಲಿ ಸಹಕರಿಸಲು ಬಹಳ ಮುಂದಿರುವುದು ಅಭಿನಂದನೀಯವಾದ ವಿಚಾರ. ಈ ಬಗ್ಗೆ ಸಹಕಾರವಿತ್ತ ನನ್ನೆಲ್ಲಾ ಹಿತಚಿಂತಕರಿಗೂ ವಂದನೆಗಳು.

[ವಿ. ಸೂ:–" ಮಹಾಜ್ಯೋತಿ ಮಹಾವೀರ " ಈ ನಾಟಕವನ್ನು ಕನ್ನಡ ನಾಡಿನ ಪ್ರಸಿದ್ಧ ಸ್ಥಳಗಳಾದ ಬೆಂಗಳೂರು, ಹಾಸನ, ಚಿಕ್ಕಮಗಳೂರು ಮುಂತಾದ ಪಟ್ಟಣಗಳಲ್ಲಿ ಅಭಿನಯಿಸಲಾಗಿದೆ. ಕಲಾಭಿಮಾನಿಗಳ, ಭಗವದ್ಭಕ್ತರ ಎಲ್ಲ ವಿಧವಾದ ಜನರಿಂದಲೂ ಮೆಚ್ಚುಗೆಯನ್ನು, ಸಹಾನುಭೂತಿಯನ್ನು, ಪ್ರೋತ್ಸಾಹವನ್ನು ಹೊಂದಿ ಈಗ ನಾಡಿನ ಎಲ್ಲೆಡೆಯೂ ವಿಜೃಂಭಿಸಲು ತುದಿ ಹೆಜ್ಜೆಯಲ್ಲಿಯೇ ನಿಂತಿದೆ.

" ಹಾಗೂ **ಕವಿದೇವ ರತ್ನಾಕರ** " ಈ ನಾಟಕದ ಕೈ ಬರಹದ ಸಾಹಿತ್ಯವನ್ನು ವೀಕ್ಷಿಸಿದವರು–ರಂಗಭೂಮಿಯ ಮೇಲೆ ರತ್ನಾಕರವನ್ನು ತರಲು ಉತ್ಸುಕತೆಯಿಂದಿರುವ ವಿಚಾರವನ್ನು ತಿಳಿಸಲು ಸಂತೋಷವೆನಿಸುತ್ತದೆ.

ಇಂತಿ, ತಮ್ಮ ಸದ್ಧರ್ಮ ಪ್ರೇಮಿ,

ವೈ. ವಿ. ಪಾರ್ಶ್ವನಾಥ.

ಸಂಕ್ಷಿಪ್ತ ಪೂರ್ವ ಕಥೆ

ಭಾರತದಲ್ಲಿ ಈಗ್ಯೆ ಸುಮಾರು ೨೫೦೦ ವರ್ಷಗಳ ಹಿಂದೆ ಜರುಗಿದ ಕಥಾವಸ್ತು

ವೈಶಾಲಿ ರಾಜ್ಯದ ಸಿದ್ಧಾರ್ಥ ರಾಜನ ಒಬ್ಬನೇ ಮಗ—ಮಹಾವೀರ - ಬಾಲ್ಯದಿಂದಲೂ - ದಯಾಧರ್ಮದ ಕಡೆ ಆಸಕ್ತಿಯಿದ್ದವನು. ವೈರಾಗ್ಯದಲ್ಲಿ ಮನಸ್ಸುಳ್ಳವನು-ಜಗತ್ತಿನ·ಜೀವರಾಶಿಗಳ ನಿತ್ಯ ಸುಖಕ್ಕಾಗಿ ಸದಾ ಚಿಂತಿಸುವನು-ಜಗತ್ತಿನ ಕಲ್ಯಾಣಕ್ಕಾಗಿ ಜ್ಞಾನವನ್ನು ಬಿತ್ತಲು, ಶಕ್ತಿಯನ್ನು ಪಡೆಯಬೇಕೆಂದು·ತಪೋ ಭೂಮಿಗೆ ತೆರಳಲು ಹಾತೊರೆಯುತ್ತಿರುವನು–ಈ ವಿಚಾರವನ್ನರಿತ ಜನತೆ ದುಃಖದಲ್ಲಿರುವವರು-ಮಹಾವೀರ ತಪೋ ಭೂಮಿಗೆ ಹೋಗುವುದನ್ನು ಎಲ್ಲರೂ ವಿರೋಧಿಸುತ್ತಿರುವರು-ಮಹಾರಾಜ ಮತ್ತು ಮಂತ್ರಿ ಇಬ್ಬರೂ ಈ ವಿಚಾರದಲ್ಲಿ ಅಂತಿಮ ಪ್ರಯತ್ನಗಳನ್ನು ಕೈಗೊಳ್ಳುವರು-ಮಹಾವೀರನಿಗಾದರೋ ಒಲುಮೆಯ ತಾಯಿ, ತನಗೆ ಜ್ಞಾನ ಶಿಕ್ಷಣವನ್ನಿತ್ತ ತಾಯಿಯುನ್ನೂ ಸಂತೈಸುವ ಬಗೆಗಾಗಿ ಆಗಾಗ ಚಿಂತಿಸುವನು. ಆದರೂ ಈ ವ್ಯಾಮೋಹದಿಂದ ದೂರಾಗುವುದೇ ಸಾಧಕನ ಗುರಿಯೆಂದು ತೀರ್ಮಾನಿಸಿರುವನು....ಇಲ್ಲಿಂದ ನಾಟಕದ ಕಥಾ ವಸ್ತು ಮುಂದುವರೆದಿದೆ.

ವಿ. ಸೂ.– ಪಾತ್ರವರ್ಗದ ವೇಷಗಳು ಸಾಮಾನ್ಯವಾಗಿ ೨೫೦೦ ವರ್ಷಗಳ ಹಿಂದಿನ ನಾಗರೀಕತೆಗೆ ಅನುಗುಣವಾಗಿರಬೇಕು-ಸಿದ್ಧಾರ್ಥ ಮಹಾರಾಜನ-ವೈಭವವನ್ನು ಸಾರುತ್ತಿರಬೇಕು-ಮಹಾವೀರನ ಪಾತ್ರವು ಗಂಭೀರತೆ, ನಿರ್ವಿಕಾರತೆ, ಸ್ಥಿತಪ್ರಜ್ಞತೆ. ಹಸನ್ಮುಖಗಳಿಂದೊಡಗೂಡಿದ ತೇಜೋಮಯ ಸನ್ನಿವೇಶದಿಂದಿರಬೇಕು–ತಪೋಭೂಮಿಯಲ್ಲಿ - ಕಾವಿ ಬಟ್ಟೆಯಿಂದ ಅಲಂಕೃತವಾಗಿರಬೇಕು :—

ಗಮನಿಸಬೇಕಾದದ್ದು ಮಹಾವೀರರು ತಪಸ್ಸಿಗೆ ತೆರಳಿದಾಗ ಅಲ್ಲಿ ಲೌಕಾಂತಿಕ ದೇವತೆಗಳ ಸೂಚನೆಯಂತೆ-ಬಟ್ಟೆಯನ್ನು ತ್ಯಜಿಸಿ - ಕೂದಲನ್ನು ಕಿತ್ತು ಬಿಸಟುವ ಕೆಲಸವನ್ನು ಇಲ್ಲಿ ಕೈ ಬಿಡಲಾಗಿದೆ.

ದೇವತೆಗಳು ಬಂದು ಸೂಚಿಸುವುದರೊಳಗೆ-ನಾಟಕದಲ್ಲಿನ ಕಥಾ (ಕಲ್ಪನೆ) ವಿಚಾರವು ನಡೆದು ಹೋಗುತ್ತದೆಂದು ಭಾವಿಸಿ ಬರೆಯಲಾಗಿದೆ. ಆದ್ದರಿಂದ ಜೈನಾಗಮಕ್ಕೆ-ವಿರೋಧವಾಗಿ ಕಂಡು ಬರುವುದಿಲ್ಲ. ವಾಸ್ತವಿಕತೆಗೆ ಭಂಗ ಬರದಂತೆ - ದೇವತೆಗಳ ಆಗಮನಕ್ಕೆ ಕೆಲ ನಿಮಿಷಗಳ ಅವಧಿಯಲ್ಲಿ ನಡೆದ ಘಟನೆಯೆಂದು ಉದ್ದೇಶಿಸಿಯೇ ಕಲ್ಪಿಸಿ ಬರೆಯಲಾಗಿದೆ-ಕಾರಣ-ಮಹಾವೀರನ-ಅಹಿಂಸಾ ಧರ್ಮದ ಪ್ರತಿಪಾದನೆಯನ್ನು ಯಥಾವತ್ತಾಗಿ ಚಿತ್ರಣದೊಂದಿದೆ ಪ್ರತಿಬಿಂಬಿಸಲು-ನಿರ್ವಾಣ ರೂಪದಲ್ಲಿ (ನಾಟಕ ರಂಗದಲ್ಲಿ) ಸಾಧ್ಯವಾಗದೆಂದು ಈ ರೀತಿಯಾದ ಅಲ್ಪ ಕಾಲ್ಪನಿಕ ಬದಲಾವಣೆಯನ್ನು ಅಳವಳಿಸಿಕೊಳ್ಳಲಾಗಿದೆ–ಮೂಲ ಉದ್ದೇಶ-ಅಹಿಂಸಾಧರ್ಮದ ಸ್ಪಷ್ಟ-ಪ್ರಚಾರ-ಹಾಗೂ ಮಹಾವೀರನ ಅಂತರಿಕ ಭಾವನೆಯನ್ನು ಬಾಹ್ಯದಲ್ಲಿ ಒಡಮೂಡಿಸಿ ಆನಂದ ಪಡುವುದೇ ಆಗಿದೆ-ಈ ವಿಚಾರಪರ ಬದಲಾವಣೆಯಿಂದ ಜೈನಬಾಂಧವರು ಯಾವ ಅಪಾರ್ಥವನ್ನು ಕಲ್ಪಿಸಿಕೊಳ್ಳಬಾರದಾಗಿ ನಂಬಲಾಗಿದೆ. ಇದರಲ್ಲಿ ಮಹಾವೀರನು ಹೇಗೆ ಮುಕ್ತಿ ಶ್ರೀಯನ್ನು ಪಡೆದನೆಂಬ ಅಂಶವನ್ನು ಪ್ರಯೋಗದಲ್ಲಿ ಕಾಣಿಸಿಲ್ಲ - ಬದಲು - ಮಹಾವೀರನು ಜೀವರಾಶಿಗಳ ಮುಕ್ತಿಗೆ ಏನು ಉಪದೇಶ ಮಾಡಿದ ಎಂಬ ಅಂಶವೇ ಮುಖ್ಯವೆಂದು ಪರಿಗಣಿಸಲಾಗಿದೆಯಾಗಿ - ಪ್ರಮಾದವಿಲ್ಲವೆಂದು ನಂಬಿದ್ದೇನೆ, ಹಾಗೂ ಕಾಲಕ್ಕೆತಕ್ಕಂತೆ ವಿಚಾರ ಪ್ರಸಾರಕ್ಕೆ ಅನುಗುಣವಾಗಿ ನಮ್ಮ ವಸ್ತುವನ್ನು ಚಲಿಸಿಕೊಳ್ಳಬೇಕು – ಮೂಲವನ್ನು ಮೂಲವಾಗಿಯೆ ಇಟ್ಟುಕೊಂಡು - ವಿಚಾರವನ್ನು ಬದಲಿಸಿಕೊಂಡು ಸಾಧನೆಯನ್ನು ಮಾಡಬೇಕೆಂಬ ನೀತಿಗೆ ಇದು ಸಮಂಜಸವಾಗಿದೆ ಎಂದೇ ನನ್ನ ಭಾವನೆ– ಸಹೃದಯರು ಸ್ವಾಗತಿಸುವರೆಂದು ಆಶಿಸುತ್ತೇನೆ.

ನಿಮ್ಮವ
ಸರ್ವಜೀವ ಪ್ರೇಮಿ,
ವೈ. ವಿ. ಪಾರ್ಶ್ವನಾಥ

ಪಾತ್ರವರ್ಗ

			ವಯಸ್ಸು
ಮಹಾವೀರ	....	ಸಿದ್ಧಾರ್ಥ ಮಹಾರಾಜನ ಸುಪುತ್ರ	30
ಸಿದ್ಧಾರ್ಥ	....	ಮಹಾರಾಜ	55
ತ್ರಿಶಲಾದೇವಿ	....	ಮಹಾರಾಣಿ	48
ಸುನೀತ	....	ಮಹಾಮಂತ್ರಿ	65
ಬಾವುಜ	....	ಸಾರಥಿ (ರಥನಡೆಸುವನು)	35
ಹುಚ್ಚ	....	ಸಂಸಾರದಲ್ಲಿ ನೊಂದು, ದುಃಖಿತನಾಗಿ-ಕಾಡಿನಲ್ಲಿ ಅಲೆಯುತ್ತಿರುವನು	45
ಕಳ್ಳ	....	ಚತುರನಾದ ಕಳ್ಳ	40
ಸೇವಕ	....	ಆಸ್ಥಾನದ ಭಟ	40

Name:-Bahubali . [illegible]
.Algur .

ಮಹಾಜ್ಯೋತಿ ಮಹಾವೀರ

ದೃಶ್ಯ ೧

ಉದ್ಯಾನವನದ ಸೀನು : ಸಿದ್ಧಾರ್ಥ ಮಹಾರಾಜನು ಚಿಂತಾಕ್ರಾಂತನಾಗಿ ಪ್ರವೇಶಿಸುತ್ತಾನೆ..........ಹಿಂದೆ-ಹಿಂದೆಯೇ ಮಂತ್ರಿ ಸುನೀತನು ಹಿಂಬಾಲಿಸುವನು.

ಸಿದ್ಧಾರ್ಥ—(ನಿಟ್ಟುಸಿರು ಬಿಡುತ್ತಾ)....ಸುನೀತ! ಇಂದೇಕೊ ಕಳವಳ, ಇಂದೇಕೊ ಹೃದಯ ಕುದಿಯುತಿದೆ........ ಕುಮಾರನು ತಪಕಾಗಿ ಪೋಗಲಿರುವನಂತೆ....ತುದಿಹೆಜ್ಜೆಯಲಿಹನಂತೆ!-ಮುಂದೇನು ಸುನೀತಾ?

ಸುನೀತ- ಪ್ರಭು, ಅಧೈರ್ಯಗೊಳ್ಳದಿರಿ. ಕುಮಾರ ಕ್ಷಮಾಮೂರ್ತಿ-ತಾಳ್ಮೆಯ ಧೃವತಾರೆಯಂತಿಹನು. ಅವನ ಅಚಲಸಂಕಲ್ಪವೆಂತಿಹುದೋ—ಅಂತೆಯೇ ನಿಶ್ಚಲ ಕರುಣಾಮಯನು ಹೌದು ಪ್ರಭು....ಅದರಿಂದ ನಾನೊಮ್ಮೆ....

ಸಿದ್ಧಾರ್ಥ— (ಸಾವಧಾನದಿಂದ) ಸುನೀತಾ- ಇಂದಿನವರೆಗೆ ಅವನ ಮನ ತದಲದಂತೆಯೆ ಕಾದುದಾಯ್ತು. ಇಂದವನ ನಿಷ್ಠೆ ಸ್ಪಷ್ಟವಾದಂತಿದೆ ಸುನೀತಾ... ಹು ...ಕಟ್ಟಕಡೆಯಾಸೆ ನೀನೊಮ್ಮೆ ಕೆದಕಿ ನೋಡು....ನನ್ನ ವೃದ್ಧಾಪ್ಯ...ನನಗೆ ವೈರಾಗ್ಯದಾ ಕರೆಯೀಯುತಿದೆ. ಇಂತಿರಲು ಮುಂದಿನಧಿಪತಿ - ಯುವರಾಜನನು ಪಟ್ಟದಲಿರಿಸಿ ನಾಂ ಕಾನನದೆಡೆಗೆ ಪೋಗುವಾ ಸಂಕಲ್ಪಕ್ಕಿಂದು ನೀನನುವಾಗು ಸುನೀತಾ.... ನೀನನುವಾಗು....

ಸುನೀತ— (ಸಂತೈಸುವ ಧ್ವನಿಯಿಂದ) .... ಆಗುವೆನು ! ಅಂತೆಸಗುವೆನು ಪ್ರಭು! ಜಿನೇಂದ್ರ ದಯೆಯಿಂದ ಧೈರ್ಯಮೂಡುತಿದೆ ಪ್ರಭು !....ಕುಮಾರನ ಮನವೊಲಿಸುವೆನೆಂಬಾಸೆ ಆನಂತದಲಿ ಧ್ವನಿಗೈಯ್ಯುತಿದೆ ಪ್ರಭು....ತಾವಿನ್ನು ನಿಶ್ಚಿಂತೆ ತಾಳಿರಿ....

ಸಿದ್ಧಾರ್ಥ— (ಆಲೋಚನಾಪರನಾಗಿ) .... ಹು .... ಎಲ್ಲವೂ ದೈವೇಚ್ಛೆ, ಸುನೀತಾ ವಿಧಿಸಂಕಲ್ಪ .... ಕರ್ಮದೊತ್ತಡವು — ವಿಚಾರ ಭ್ರಾಂತಿಯೇ ನಮಗುಳಿದ ವ್ಯಸನ...ಕರ್ತವ್ಯ ಕಾರಣವನೇ ನುಂಗುತಿದೆ, ಪ್ರಯತ್ನದ ಹೊಣೆ ನಿನ್ನದು ಸುನೀತಾ ನಿನ್ನದು.... (ಭಾವಪರವಶನಾಗುವನು)

ದೃಶ್ಯ

ರಾಜಬೀದಿಯ ಸೀನು—ವೃದ್ಧಮಂತ್ರಿ ಸುನೀತ ವ್ಯಸನಾಕ್ರಾಂತನಾಗಿ ಪ್ರವೇಶಿಸುವನು.

ಸುನೀತ (ಸ್ವಗತ)—ಕುಮಾರನಿಗೆ ತನ್ನೆಲ್ಲ ನಿರ್ಧಾರ ಬಲಗೊಂಡಿಹುದು. ತಡೆಯಬೇಕೆನುತ ಜಾಣ್ಮೆಯೊಳು ಕಳೆದೆವು ಕಾಲವನೆಲ್ಲ ತಳಮಳದೊಳು,...ಇಂದು....ಈದಿನ....ಕುಮಾರನ ಅಂತಿಮನಿರ್ಧಾರದ ಮಹಾ ದಿನ....ನಮಗೆಲ್ಲ....

ಹಿಂದಿನಿಂದ ಮಹಾವೀರ ಪ್ರವೇಶಿಸುತ್ತಾ-ಹಸನ್ಮುಖದಿಂದ ಮಂತ್ರಿಯನ್ನು ಕೂಗುವನು.

ಮಹಾವೀರ—ಗಂಭೀರದಿಂದ....ಬಾ ಸುನೀತ, ಮಂತ್ರಿಯಜ್ಜ!

(ಮಂತ್ರಿ ಬೆಪ್ಪಾದವನಂತೆ ಹಿಂತಿರುಗಿ ಹತ್ತಿರ ಬಂದು ನಿಲ್ಲುವನು)

ಇಂದೆನೆಗೆ ನೀಂ ಬಂಧುವಾಗಿಹೆ ಸುನೀತ! ಜಗದ ಸಾಮ್ರಾಜ್ಯ ಬಂಧನದಿ ನಾನೊಬ್ಬ ಯುವರಾಜ; ನೀನೆನಗೆ ಸೇವಕ........

ಬಿಗಿದಮಾಯೆಯನು ಕಿತ್ತರಿದು ನೋಡೆ ನಾವೆಲ್ಲ ಉಗಿದ ಸಿಪ್ಪೆಯಂತಿರುವ ಸೋದರರು ಸುನೀತ ! ಎಂದಾದುದೋ? ಈ ಭುವಿಯ ಯಮದೀಕ್ಷೆ ನನ್ನ ನಿನ್ನೊಳಗೆ ಭೇದವಿದೆಯೆಂಬ ಕರ್ಮನಿರೀಕ್ಷೆ ಜಗವಿಂದು ನಿಸ್ಸೀಮ ವ್ಯಾಮೋಹದಾಶ್ರಯದಿಂದೆ ತಾನೇ ಉತ್ಸವಗೊಳ್ಳುತಿದೆ !....ಸುತ್ತೆಲ್ಲ ಸತಿಸುತರ ಮೋಹ ಬಂಧನದಾ ಕಹಳೆಯೂದುತಿದೆ....ಮನಮನವು ಕಲಕುತಿದೆ ಆಸೆಯಾ ಜಯಘೋಷವಿಮ್ಮಡಿಸಿ ಸುನೀತ....

ಅತ್ತವರ, ಅಳಕುವರ, ಆಸೆಮೋಹಗಳಲಿ ಬಳಲಿದರ, ಬದುಕುವಾಸೆಯಲಿ ಮುದಿತನವ ಮರೆಯುವರ ಸುತ್ತಲಿರೆ ನಾನೊಲ್ಲೆ ಸುನೀತ ! ಎತ್ತಲಾದುದೀ ಪಾಡೆಲ್ಲ ಜಗಕೆ? ಕರ್ಮದಾ ನಿಮಿತ್ತದಿಂದಲ್ಲದಲೆ.... ಸುತ್ತುವರೆದಾ ಈ ಅಜ್ಞಾನವನು ಕಿತ್ತೊಗೆಯೆ ಪೋಗುತಲಿಹೆನು–ನಿತ್ಯಾನಂದದಾ ರಾಶಿಯನೆ ಹೊತ್ತು ತರುವೆನು ಸುನೀತ....ಜಗಕೆಲ್ಲ ಹಂಚುವೆನು ಮಂತ್ರಿಯಜ್ಞ.

ಸುನೀತ—(ದುಃಖದಿಂದ)....ಯುವರಾಜ ! ಎಂದಾದರೊಂದು ದಿನ ನಿನ್ನ ಯುವರಾಜತನವು ತಾಂ ರಾಜತನದಿಂದೋಲೈಸುವಾ ಭಾಗ್ಯವನು ಕಾಣುವೆನೆಂದಿದ್ದ ಸಂಕಲ್ಪವಿಂದು ಮುರಿದುಬಿದ್ದುದೇ ?

ಎನ್ನ ಮುದಿತನವು ನಿನಗೊಂದು ಮುಕ್ತಿಯ ದಾರಿಯಾಗುದೇ? .... ಮುಂದಿನಾ ಮಂತ್ರಿಯನಾರಿಸುತೆ ಮುಕ್ತನಾಗುವೆನ್ನಾಸೆಯಿಂದು ಬರಿದಾದುದೇ !....ಕುಮಾರ...ಎಂದೆಂದು ಪೋಗಿಸಿದಾ ಮನವಿಂದು.... ಕಸವಾಗುತಿದೆ....ಬೇಡ ! ಬೇಡ !....ಕುಮಾರ....ಅಪ್ಪಾಜಿ ವೃದ್ಧಾಪ್ಯದೊಳು ನಿನ್ನ ಸಿರಿ ಸೌಭಾಗ್ಯವನು ಕಣ್ತುಂಬ ನೋಡುವಾ ಹಿರಿಹಿಗ್ಗಿನಾ ದಿನಪೊರೆದ ಕಾಯುತಲಿಹರು.?..ಆಗದು ಕುಮಾರ ! ನಿನಗಾಗಿ, ನಿನ್ನ ಪಟ್ಟಂ ವೈಭವವ ನೋಡಲಿಕಾಗಿ ನಾನಿನ್ನು ಕರ್ತವ್ಯದಾ ಕಲ್ಲಾಗಿ ಕ್ರಾದಿಹೆನು....ಎನ್ನಮನವನುಲುಗಿಸ ಬೇಡು!....ಮುಂದಿನ್ನೂ ದಿನಗಳಿವೆ

ನಿನ್ನ ಘನತಮದ ದಿವ್ಯ ಸಂದೇಶವನು ಹೊತ್ತು ತರುವುದಕೆ....ಆ ಚಿಂತೆಯನು ಕಳೆಯೀಗ ಕುಮಾರ....

ಮಹಾವೀರ....ನೀ ಎನಗೆ ಮಂತ್ರಿಯಾಗಲಿಹ ಹಿರಿಯಜ್ಜ! ಯುವರಾಜನೆಂದಧಿಕ ಮೋಹದೊಳು ಮುದಿತನವ ಮರೆತು ನಲಿದಾ ಸುಕೃತಾತ್ಮ ಸುನೀತ!—ಇಂದೆನಗೆ ಬಾಳುಬೀಳಾಗಿಹುವದು. ನಶ್ವರವು ಮೇಲೆದ್ದು "ಸಿದ್ಧ" ನನು ತೋರುತಿದೆ. ಬೋಧೆಗೈಯ್ಯುತಿದೆ ನಾನರಸುವಾ ಮುಕ್ತಿದಾರಿಯಾ ಕ್ರಮಾಂತರವನು ಮೋಹದಾ ಮುಸುಕ ತೆರೆದೆನ್ನ ಕಳುಹು, ಆದರದಿ ನೆರವಾಗು .... ಎನ್ನಜ್ಜ, ನಾಂ ಪೂರಮಾಡಲು....

ಸುನೀತ—(ದುಃಖದಿಂದ)....ಮನವೆರಡು ಮಾಡದಿರು ಯುವರಾಜ! ನಿನ್ನಾಧಿಪತ್ಯದ ರಾಜ್ಯದೈಸಿರಿಯ ನೋಡೆ ಕಾದಿಹರು ಸುರನರರು ನಿನ್ನ ವೈಭವವ ನೋಡಲಿಹವೆನ್ನ ಮನವಿದು ಪ್ರಾಯದೊಳೇ ಇಹುಮ! ಅದಕಿಂದು ಮುದಿತನವ ತರಬೇಡ ಕುಮಾರ! ಕೈಯೊಡ್ಡಿ ಬೇಡುವೆ (ಮಹಾವೀರನ ಹಸ್ತಗಳನ್ನು ಹಿಡಿಯುವನು)

ಮಹಾವೀರ— (ಸ್ಥಿತಪ್ರಜ್ಞನಂತೆ) .... ಬದುಕಿನೊಳು ಬಾಳ ಮೋಹದಾ ಚಿಂತೆ ತಾಂ ಬಲು ಸುಂದರದ ಬಯಕೆಗಳ ಬಳಸಿಕೊಂಡಿದೆ ....ಬರಿಗಣ್ಣಿಂದ ನೋಡೆ ಬೆರಗಾಗುವೆವು ಸುನೀತ! ಅರಿವಿಂದ ನೋಡೆ ತೆರೆದ ಕಣ್ಣಿಂದ ನೋಡೆ ಬಟ್ಟ ಬಯಲಾಸೆಗಳವೆಲ್ಲ ಎನ್ನಜ್ಜ....

ದಿನ ದಿನದೊಳ್ ಜಗದ ಮನವತ್ತ ಎತ್ತತ್ತಲೋ ಜಗ್ಗುತ್ತಿದೆ.... ಪೊಸ ಬಯಕೆಗಳಾಶ್ರಯದೆ, ಆ ಜೊಳ್ಳು ಬಳ್ಳಿಯೆಂತು ಆಸರೆಯ ನೀವುದು–ಎಷ್ಟು ಕಾಲವನು ಕಾಯ್ವುದು–ಅದರ ಸುಳಿ ಸಿಕ್ಕಿಬೀಳುವಾ ಮುನ್ನವೇ ಸಿಕ್ಕು ಸಿಗಲಾರದಾ, ಶಾಶ್ವತದ, ಅನಂತದ....ಬುಡದಾಶ್ರ

ಯವ ಪಡೆಯಬೇಕೆನುತ, ಜಗಕೆಲ್ಲ ಚಿರಶಾಂತಿಯನು ತಂದು ಚೆಲ್ಲಿ, ಜ್ಞಾನ ಸೌರಭವನೀಯಲು ಸಾಗುತಿಹೆನಿಂದು ಸುನೀತ....

ಸುನೀತ—ನೀಂ ಪಡೆದು ಬರುವಾ ಶಾಂತಿಯನು ನಾಂ ಕಂಡು ಹಿಗ್ಗುವಾ ದಿನವೊಂದು ಸಾಗಿ ಪೋಗಿದೆ ಕುಮಾರ–ಮರಳಿಬಾರದದು. ಇಂದೊ, ನಾಳೆಯೋ....ಎನ್ನ ಪರಲೋಕ ಗತಿಯೆಂದಿರುವ ನಾನೆಂತು ಪೇಳಲಿ ಕುಮಾರ....ಇಂದೆ ನೋಡುವೆನು. ನೋಡನೋಡುತ....ನಾಂ ಕಣ್ಮುಚ್ಚಿದಂದೇ ನೀಂ ಪೊರಮೊಡಲಾರೆಯಾ ಕರುಣಾನಿಧಿ !....

ಮಹಾವೀರ— ಜವವೆಂದು ಬರುವನೋ ಅದನರಿಯೆವು ! ನಾನು ಯುವಕ, ನೀನು ವೃದ್ಧ-ಯಾರಾದರೇನಂತೆ! ಕಂಡು ಕಾಣದಾದಿನ ಜವನಂದೇ ಬರುವನು ಸುನೀತ....ಅದಕಿಂದೇ ಪೋಗುವುದುಚಿತವು.

ಜಗವು ಬಹು ದುಃಖ ಭಾರವನೆ ಹೊತ್ತು-ಸುಖದ ದಾರಿಯೊಳು ಮದ್ದಾನೆಯಂತಿದೆ ಸುನೀತ; ಈ ಸಂಸಾರ ನಿಸ್ಸಾರದಾ ಅಂತರವ ತಿಳಿವ....ಚಿಂತೆಯೇ ಜಗಕೆ ದೊರಕದಾಗಿದೆ ಸುನೀತಾ....ಅದರಿಂದೆ ನಾನಿನ್ನು ನಿಲ್ಲುವುದೆ? ಒಂದು ದಿನ ಕಂತೆಯೊಗೆಯುವುದೆ? ನೀನಿದ ಕುತ್ತರಿಸು ಸುನೀತಾ....ಹರಸೆನ್ನ ಹಿರಿಯಜ್ಜ ನಾಂ ಪೊರಮೊಡಲು....

ಸುನೀತ—(ಅತಿ ದುಃಖದಿಂದ) .... ಪೊರಮೊಡು ಕುಮಾರ! ಜಗತ್ ಶಾಂತಿಯ ವೀರದೂತನೆ, ಜರಾಮರಣ ನಿಗ್ರಹ ತಾರಕನೇ! ಸ್ವಾರ್ಥದೊಳಿಂದು ಎನ್ನ ಜ್ಞಾನ ಸತ್ತಿತು–ಬಿತ್ತಿದಿ ಜ್ಞಾನ ಬೀಜವನೆನ್ನ ಜಡಮುಸ್ತಕದೊಳು....ಧನ್ಯನಾಗು ಕುಮಾರ !

(ಬೇರೆಡೆ ತಿರುಗಿ ತೀವ್ರ ದುಃಖದಿಂದ ಅಲ್ಲಿ ನಿಲ್ಲದೆಯೇ ಹೋಗುವನು)

ಮಹಾವೀರ—(ಹಸನ್ಮುಖದಿಂದ)....ಆದರದ ಸೋದರನಂತಿದ್ದ

ಎನ್ನ ಹಿರಿಯಜ್ಜ, ಮಹಾಮಂತ್ರಿ ಸುನೀತ. ಎನ್ನ ಮಹಾ ಸಂಕಲ್ಪಕ್ಕಿಂದು ಧನ್ಯತೆ ಕೋರಿದ–ಮಹಾ ಮಹಿಮನೆ .... ಮೋಹಶತ್ರುವನು ಜೈಸುವಾ ಮನಕೊಡಲಿ ನಿನಗೆ ಆ ಪರಾತ್ಪರನು....

—ತೆರೆ ಬೀಳುವದು—

ದೃಶ್ಯ ೩

ಅಂತಃಪುರದ್ದ ಸೀನು....ಸಿದ್ಧಾರ್ಥ — ತ್ರಿಶಲಾದೇವಿಯರು ರಾಣಿವಾಸದಲ್ಲಿ ವಿಶ್ರಾಂತಿಗಾಗಿ ಕುಳಿತಿರುತ್ತಾರೆ-ಸಿದ್ಧಾರ್ಥ ವ್ಯಸನಾಕ್ರಾಂತನಾಗಿರುತ್ತಾನೆ.... ರಾಣಿ ರಾಜನ ಮೊಗವನ್ನು ಬಾರಿ ಬಾರಿ ನೋಡಿ ಗಾಬರಿಗೊಳ್ಳುವಳು]-

ಮಹಾರಾಜ—(ನಿಟ್ಟುಸಿರುನಿಂದ) ...ದೇವಿ !....ದೇವಿ—ಕೇಳಿದೆಯಾ ಸುನೀತ ಪೇಳಿ ಪೋದುದನು ?

ತ್ರಿಶಲಾ— (ಆಶ್ಚರ್ಯದಿಂದ) ....ನಾನರಿಯೆ ಸ್ವಾಮಿ (ಎದ್ದು ನಿಲ್ಲುವಳು)

ಸಿದ್ಧಾರ್ಥ—(ಮೇಲಕ್ಕೇಳುತ್ತ)....ದೇವಿ !.....ನಮ್ಮ ವೈಭವದ ಕನಸೆಲ್ಲ ಮಸಣದ ಮಾರ್ನವಮಿಯಾಯ್ತು. ಕುಮಾರ ತಪಕಾಗಿ ಪೋಗಲಿರುವನಂತೆ, ಅದೇ ನಿಶ್ಚಯವಂತೆ !

ತ್ರಿಶಲಾ—(ಸಖೇಶ್ಚರ್ಯದಿಂದ)—ಹಾ !—ಏನಂದರಿ ಸ್ವಾಮಿ ಇದು ನಿಜವೆ ?—ನಿಜವೆ ?....(ದುಃಖದಿಂದ)....ಇರುವ ಸೌಭಾಗ್ಯವಾ ನೆರವಿನ್ನೆಮಗೆ ನುಚ್ಚು ನೂರಾದುದೇ-ಹಾ-ಕುಮಾರಾ, ಬಾಲಚಂದಿರಾ (ಸ್ವಗತ)–ಮೋಹ ಬಂಧನವು ಬೇಡೆಂದು – ನಮ್ಮ ದುಃಖದೇಹಗಳ ಬಂಧಿಸಿದೆಯಲ್ಲ. ಚಿಂತೆಮಡುವಿನೊಳು,.... (ಪ್ರಕಟ) ....ಮುಂದೇನು ಸ್ವಾಮಿ ?...

ಸಿದ್ಧಾರ್ಥ–ದೇವಿ ! ಕಡೆಯಾಸೆ ಇನ್ನೊಂದೆ, ಜಗವಿನ್ನು ತಡೆಯ್ಯಲಾಗದವನನು-ನಿನ್ನೊಂದು ಒಳಕರೆಯು, ಕೂಗಿ ನಿಲ್ಲಿಸದೇ ಅವನ ?–ಹೆತ್ತಮ್ಮನಾ ಚಿತ್ತಶಾಂತಿ ಹತ್ತಿ ಹೊಗೆಯಾಡುತಿರೆ–ಉತ್ತರಿಪ ಕುಮಾರನ ಮನ ಕಲಕದಿರದೇ ?... ಪೇಳು ಮುದ್ದಾದ ಮಾತೊಂದ ದೇವಿ....

ತ್ರಿಶಲಾ...(ದುಃಖದಿಂದ)...ಪೇಳುವೆನು ಸ್ವಾಮಿ...ಕುಮಾರನಿದುವರೆಗೆ ಮಾತೊಂದ ಮೀರಿದುದ ನಾ ಕಾಣೆ ! ಕಾಣುವಾಸೆ ಎನಗಿಲ್ಲ....ಹೆತ್ತಕರುಳಿನೊಳ ಕೂಗಿನೊಳಿ ಕೇಳುವೆನು ಸ್ವಾಮಿ....ಕಂದಾ, ಇಂದೇ ಪೋಗದಿರೆಂದು.

ಸಿದ್ಧಾರ್ಥ—ದೇವಿ !.... ಕುಮಾರನುದಯದಂದೇ—ಜಗ ನಲಿಯಿತು. ಜಗದುಃಖ ವಿಮೋಚಕನವತಾರನಿವನೆಂದು ಹಾಡಿ ಹಾಡಿ ಹಬ್ಬಹರಿದಿನಗಳಲಿ ಸಂತಸದಿ ಮೈಮರೆತು ಕಾದಿತ್ತು; ಇದೇ ಕಾಲವನು ದೇವಿ....ಜಿನವಾಣಿ ಎಂದು ಹುಸಿಯಲ್ಲ— ಜಿನೇಂದ್ರ ಧ್ಯಾನವಿದೇ ಎಮ್ಮ ಕಟ್ಟಕಡೆಯಾಧಾರ. ಬೇಡು ದೇವಿ....ಜಿನೇಶ್ವರನ ಪಾದಾಂಬುಜದೊಳು ಪುತ್ರನ ಸಂಕಲ್ಪ ವಿಮೋಚನೆಯ ಹಾದಿಯನು.

ತ್ರಿಶಲಾ—ಬೇಡುವೆನು ಸ್ವಾಮಿ....(ಹಾಡುವಳು)....

(ರಾಜನು ಭಕ್ತಿಯಿಂದ ಕರಜೋಡಿಸಿ ನಿಲ್ಲುವನು)

ಹಾಡು

ಸಕಲರ ಪೊರೆವಾತ.....ಜಿನೇಶಾ
ನೀನಬಲಳ......ಮರೆತೇಕೆ ?
ಹೇ ಭವತಾರಕನೆ....ಹೇ ಭವಭಯ ಹರನೇ
ಭವಾಂತ್ಯ ಮಾಡೋ ಜಿನೇಶಾ

ಓ ದಯಾನಿಧೇ....ನೀನಬಲಳ—ಮರೆತೇಕೆ ?
ಬಂಧು ಬಾಂಧವರು ಹಿಂದೆ ನೆನೆಯರೋ
ಬಂಧನ ಬಿಡಿಸೋ ಜಿನೇಶಾ

ಮುಂದಿವೂರ್ಬಲ ಬಂದು ಬಾರದೋ
ಬಂಧನ ಬಿಡಿಸೋ ಜಿನೇಶಾ

ಬಂದಾ ಧ್ಯಾನವಿಧೀ....ಬಾರದೊ ಬರಿಬನದಿ
ಬಂಧನ ಬಿಡಿಸೋ ಜಿನೇಶಾ

ಕರುಣಿಸು ಕುವರನ ಕರುಣಾಕರ ನೀ
ಸಕಲರ ಪೊರೆವಾತ ಜಿನೇಶಾ
ನೀನಬಲಳ ಮರೆತೇಕೆ ?

[ತೆರೆಬೀಳುವುದು]

ದೃಶ್ಯ ೪

[ವನಾಂತರದ ಸೀನು—ಮಹಾವೀರ ಒಂದು ಬಂಡೆಗಲ್ಲಿನ ಮೇಲೆ ಕುಳಿತು ಮೌನವಾಗಿ ಚಿಂತಿಸುತ್ತಿರುತ್ತಾನೆ]

ಮಹಾವೀರ....[ಸ್ವಗತ] (ಮೇಲಕ್ಕೀಳುತ್ತಾ)....ಹೇ ವಿಧಿಯೇ! ಜನ್ಮವೇಕೆ ಕೊಟ್ಟೆನಗೆ? ನಾನೊಂದು ಕಲ್ಲುಗರ್ಭದೊಳು ಹುಟ್ಟಬರಲಿಲ್ಲವೇಕೆ? ನಾನೊಂದು ಕಲ್ಲುಗರ್ಭದೊಳು ಹುಟ್ಟಬರಲಿಲ್ಲವೇಕೆ ?.... ಹುಟ್ಟಬಂದಿಹೆನು ಬರಿಮೋಹದಲ್ಲಿ! ಹುಟ್ಟು ಸಾವುಗಳ ಬಂಧನವೆ ಹಿತವೆಂದರಿತ ಹೆತ್ತ ಮಾತೆಯಾ ಗರ್ಭದೊಳು-(ಶತಪಥ ತಿರುಗುವನು)- ಎತ್ತಲಾದುದೀ ಜೊಳ್ಳು ಜೀವನದ ಕತ್ತಲಾ ಬಾಳುವೆ!....ಏನೊಂದನರಿಯದಾ ಮೌನವೇ! ಸುತ್ತಾಡಬಾರದೇಕೆ ನೀನು ಜಗದರಾಗ ಮೋಹದುದ್ಯಾನದೊಳು ಸಂಚರಿಸಿ?

....ಬಾಳೆಂಬುದೇ ಬೀಳು! ಹುಟ್ಟುವುದೆ ಹಾಳು!....ಹುಟ್ಟದಿರುವೆನೆ ಮುನ್ನ ಕರ್ಮದಾ ಪಟ್ಟು ಬಿಡದೆನ್ನ....ಹುಟ್ಟದೆನೆ ಕೆಟ್ಟ ಮೋಹವು ಸುತ್ತಾಡಿ ಸುಡುತಿರುವುದು.... ಸತ್ತು ಸಾಯುವಾ ಈ ಜಡ ದೇಹ ನಂಬಿ....

ಹೇ ತಾಯೆ! ನೀನೇಕೆ ನನ್ನ ಹುಟ್ಟನು ನಿನ್ನಲಿಟ್ಟುಕೊಂಡೆಯಮ್ಮ?.... ಆರೇನ ಮಾಳ್ಪರು? ತಾಯೇನ ಮಾಳ್ಪಳು.... ಎಲ್ಲರೂ ಮುನ್ನ ಕರ್ಮದಾ ಮೋಹ ಸಂತಾನದಾ ಮಕ್ಕಳೇ ಆಗಿರುವಲ್ಲಿ....

ಹೇ ವಿಧಿಯೆ!....ಹಾ!– ಏನನ್ನುವಳೋ ಮಾತೆ, "ಇಟ್ಟಾಣೆ ಪೋಗದಿರು ಕುಮಾರ" ಎಂದೊಡೇನ ಮಾಡಲಿ?

ಇಲ್ಲ— ಇಲ್ಲ (ನಗುತ್ತಾ) ಈಗಲೀಗ ಮೋಹಬೆಟ್ಟದಾ ತುತ್ತ ತುದಿಯಲಿ ನಿಂತಿಹೆನು; ಮೆಟ್ಟಿ ಮೇಲೇರಲೋ? ಏರುವೆನು— ಮೇಲೆ ಹಾರುವೆನು, ತಳವನಾರಿಸಲಾರೆ.

(ನಿರ್ಧಾರದಲ್ಲಿ) ಎಲೆ ಮನವೆ!—ಹಾ, ಧೃಡವಾಗು; ಮೃಡನಾಗುವೆ ಮುಂದೆ-ಎದೆಯೆ ಬಿರಿಯದಿರು; ಹೃದಯವೆ ತಲ್ಲಣಿಸದಿರು ಉಲ್ಲಾಸದಿಂದಿರುವೆಯಂತೆ,....ಕಲ್ಲಾಗು ಮನವೆ ಕಲ್ಲಾಗು – ಮುಳ್ಳ ಹಾದಿಯ ಬಿಟ್ಟರುವೆ – ಇನ್ನು ಮುಂದಾಗು.

ಧೈರ್ಯವೆದೆಯೇ ಧೈರ್ಯ – ಶೌರ್ಯತಾಳಿರುವೆ ಆರ್ಯಕುಲದಾ ಕೀರ್ತಿಯನು ಕಾಯುವೆ ಮುಂದೆ ಮನವೆ, ನೀನೀಗ ಮಾಸದಿರು— ಅಗೋ ಕರೆಯುತಿದೆ ಮೋಹಪಾಶ! (ಎಚ್ಚೆತ್ತವನಂತೆ)....ಎಚ್ಚರಿಕೆ! ಮೋಸ ಹೋಗುವಿ ನಾಶವಾಗುವಿ....

(ಎತ್ತರದ ಧ್ವನಿ) ಎಲೆಲೇ! ಮೋಹವೆ! .... ಜಗದ ಮೂಕ ವೇದನೆಯ ತುಣುಕೇ!–ತೊಲಗಾಚೆ!–ನಿನ್ನ ಸ್ನೇಹ ಸಾಕಾಯ್ತು–ಹು ದೂರ ಸರಿ....

(ವಿಕಲ್ಪಭಾವದಿಂದ)......ಹಾ–ತಾಯಿ–ತಾಯಿಯಾಜ್ಞೆ......ಎಲೆಲೆ–ಮೋಹ!–ಹೆತನ್ಮಸಾ ಸೆರಗಿನಲಿ ಬಿದ್ದು-ಮುತ್ತಿ ಕಾಡುವೆಯಾ?.... ಧಿಕ್ಕಾರ—ಧಿಕ್ಕಾರ–ನಿನ್ನುರುವಿಕೆಗೆ

(ತೃಪ್ತಿಯಿಂದ)-ನಾಂ ಸಿದ್ಧಪದವಿಯ ಗುರಿಯ ದಾರಿಯೊಳಿರುವೆ ....ಆಗೋ ನೋಡಲ್ಲಿ! ಸಿದ್ಧ ಶಿಲೆ ತೋರುತಿದೆ, ಶತಕೋಟಿ ರವಿಗಳಲ್ಲಿ ಶೂನ್ಯರು....ಆ ಪ್ರತಿಭೆಯೊಳು ಕೋಟಿ ಬ್ರಹ್ಮಾಂಡಗಳು ಕಟಿಬದ್ಧವಾಗುತಿವೆ–ದಶದಿಕ್ಕುಗಳ ಪೂರ್ಣ ವಿರಾಮ ತೇಜೋಜ್ವಲದಲ್ಲಿ ಧ್ವನಿಗೈಯ್ಯುತಿವೆ, ತ್ರೈಲೋಕ್ಯ ಧರ್ಮ ಜ್ಯೋತಿ–ಅಲ್ಲಿ ಆ-ಅಖಂಡ ತೇಜಸ್ಸಿನೊಳು ಪಾಲುಗೊಳ್ಳುತಿದೆ....

ಓ ಸತ್ಯಸಂಕಲ್ಪವೇ–ನಿನ್ನ ಕರುಣೆ ಕರೆದು ತೋರುತಿದೆ ಆ ಮುಕ್ತಿ ದ್ವಾರವನು-ಬಂದೆ-ಬಾಚಿಕೊಳ್ಳೆನ್ನ

(ವೈರಾಗ್ಯ ಗೀತೆಯನ್ನು ಹೇಳುವನು)

(ವಚನ ರೂಪದಲ್ಲಿ)....ಜಗದೊಳಾರ-ನೆರವು....ನಿರಾಧಾರ -

ಹಾಡಿನ ರೂಪದಲ್ಲಿ

ಆರನೆರವು ನಿರಾಧಾರ....
ಜಗದೊಳಗಾರ ನೆರವು ನಿರಾಧಾರ
ಓ–ಆತ್ಮನೆ ನಿನ್ನಯ ನೆನೆವುದೆ ಎನಗಾಧಾರ!
ನಿತ್ಯ ನಿರಂಜನ ನೀರ ನಿರಾಕಾರ
ನಿನ್ನ ಧ್ಯಾನವೇ ಜಗತ್ತಿಗಾಧಾರ
ಸತ್ಯ ಪಾವನ ಸೃಷ್ಟಿಯ ಸಾರ
ನಿನ್ನಯ ನೆಲೆಯೇ ಎನ್ನ ವಿಚಾರ

ಅಂತ್ಯವಿಲ್ಲವು–ಆಸೆಗು ಆನಂದಕ್ಕು
ಕಂತೆಯೊಗೆಯಲೇ ಬೇಕು–ಎಲ್ಲಪಸುಳಿದಿಟ್ಟು
ಚಿಂತಿಸು – ಚಿಂತಿಸು ಅನಾದಿ ಧರ್ಮವನೆಲ್ಲವ ಬದಿಗಿಟ್ಟು
ಆರನೆರವು ನಿರಾಧಾರ........

—ತೆರೆ ಬೀಳುವುದು—

ದೃಶ್ಯ ೫

[ತ್ರಿಶಲಾದೇವಿ ಚಿಂತೆಯಿಂದ ಶಯ್ಯಾಗಾರದಲ್ಲಿ ಕುಳಿತಿರುವಳು. ಮಹಾವೀರನು ಅವಸರದಿಂದ ಪ್ರವೇಶಿಸುವನು]

ಮಹಾವೀರ—(ದೈನ್ಯದಿಂದ) .... ತಾಯೆ, (ಹತ್ತಿರ ಬಂದು)—ವ್ಯಸನದಿಂದಿರುವೆಯೇಕೆ ?....

ತ್ರಿಶಲಾ !—(ಮೇಲಕ್ಕೇಳುತ್ತಾ)....ಬಾ ಕುಮಾರ (ನಗುಭಾವದಿಂದ) ನಮ್ಮ ಬಾಳುವೆಯನೆಲ್ಲ ಹಸನ ಮಾಡುವ, ಕುಸುಮ ಕೋಮಲ ಎದುರು ನಿಂತಾಗ ವ್ಯಸನವಿನ್ನೆಲ್ಲಿ....

ಮಹಾವೀರ—(ಸ್ವಗತ)....ಧೈರ್ಯವೆದೆಯೇ ಧೈರ್ಯ....

ತ್ರಿಶಲಾ—(ಮುಂದುವರೆಸುತ್ತಾ)ನಮ್ಮ ಕ್ರಿಯಾಶಕ್ತಿಯನೆಲ್ಲ ಕಡಿ ಮುಕ್ತಿಯನರಸಲಿಕೆ ಪೋಗಲಿರುವೆಯಂತೆ ನಿಜವೆ:ಕುಮಾರ?.... ಮಹಾ ಮಂತ್ರಿಗಳನು ಯುಕ್ತಿಯಿಂದಲೆ ವಿಮುಖಗೊಳಿಸಿ ಅನುಮತಿ ಪಡೆದೆಯಂತೆ ನಿಜವೆ?

ಮಹಾವೀರ—(ಹಸನ್ಮುಖದಿಂದ)....ಯುಕ್ತಿಯನೇನು ಮಾಡಲಿಲ್ಲವು ತಾಯೆ. ಕೀಳಾಸೆಗಳು ಕಿರಿದೆಂದು ಎನ್ನ ಬಾಳಿನ ಭವ್ಯ

ಸಂಕಲ್ಪವೇನೆಂಬುದನರುಹಿದೆನು; ಸಾಳಿನಾ ಮಾನವನ ಬಾಳು ಹಾಳಾಗುವುದರ ಪರಿಯನರುಹಿದೆನು ತಾಯೆ!

ತ್ರಿಶಲಾ—(ಕಾತುರತೆಯಿಂದ) .... ಏನಾದರರುಹು! ನಮ್ಮ ಬೇನೆ ಏನೆಂಬುದನು ತಿಳಿವ ಮನ ಮಾಡು. ಕುಮಾರ, ರಾಜ ಪರಿವಾರವೊಂದೆಡೆ–ರಾಜ್ಯದಾ ಪ್ರಜಾ ಕೋಟಿಯೊಂದೆಡೆ–ನೋವು ಪಡುತಿದೆ ಕುಮಾರ–ಪರಹಿತ ಸಾಧನೆಗಾಗಿ ಈಪರಿ ಪ್ರಜಾ ಸಂಕಟವೊಡ್ಡುವುದು ಉಚಿತವೆ ಕುಮಾರ?....ನೀಂ ಕಾನನದೆಡೆ ಇಂದೇ ಪೋಗುವಿಯಂತೆ? ಆತ್ಮ ಕರೆಯನಿತ್ತಿರುವನಂತೆ ನಿಜವೆ ಕುಮಾರ?

ಮಹಾವೀರ—(ಪ್ರಸನ್ನತೆಯಿಂದ) ....ಹೌದು ತಾಯೆ! ಚಿಂತೆ ಬಂದಿತೆ ನಿನಗೆ, ಅಲ್ಲಿ! ಕರುಣಾಮಯ ಧರ್ಮಮೂಡಿ ಮುತ್ತಿರುವ ಅಖಂಡ ಪ್ರಕಾಶದ ನಿನ್ನ ಹೃದಯ ಮಂದಿರದೊಳೂ, ಚಿಂತೆಯೂ ಕತ್ತಲೆ ಕವಿಯಿತೆ ಮಾತೆ? ನೀನಾಗ ಈ ಸಂಸಾರ ಜೀವನವು ಸಂತೆಯಾ ಕಂತೆಯಂತೊಂದು ದಿನ ನಿಸ್ಸಾರವಾದುದೆನುತ ಬೋಧಿಸುತ ಧರ್ಮ ಬೀಜವ ಬಿತ್ತಿ ಪೋಷಿಸಿದುದ ಮರೆತೆಯಾ ಮಾತೆ?

ತ್ರಿಶಲಾ....(ಸಮಾಧಾನದ ಶೋಕದಿಂದ)....ಮರೆತಿಲ್ಲ ಕುಮಾರ ಅದಕೀಗಲೆ ಸಮಯ ಬಂತೆ?—ಹೆತ್ತ ಮಾತಾಪಿತರ್ಗೆ ಮುಪ್ಪು ಬರುವಾಗ ನಿನಗೆ ಮುಕ್ತಿ ಚಿಂತನೆಯೆ ಕಂದಾ? (ವಿನಯದಿಂದ).... ಸತ್ತ ಸುಡಗಾಡ ಬಿಡುವಂತೆ ನಮ್ಮಗಳನಗಲಿ ಪೋಗುವುದುಚಿತವೆ ನಿನಗೆ?

ಅಪ್ಪಾಜಿ ಮುಪ್ಪಿನೊಳು ನೆಮ್ಮದಿಯ ಬಯಸಿದುದು, ಮುಕ್ತಿ ಚಿಂತೆಯನು ತೋರಿದುದು, ನಿನ್ನಭ್ಯುದಯವ ನೋಡಬೇಕೆನುತ ಕಾದ ಕಾಲವದು ಬೆಪ್ಪುತನದಾ ಕಾರ್ಪಣ್ಯವಾಯ್ತೆ?.... ಕುಮಾರ.... ನಮಗೆ

ನೀಂ ಮುಕ್ತಿ ಮಾರ್ಗವತೋರಿ - ಋಣ ವಿಮುಕ್ತನಾಗುವುದು ಮಿಕ್ಕಿ ನಿನಗೆ ನಾವು ಕೋರುವಂತಾಯ್ತೆ ? ನಮ್ಮ ಮುಕ್ತಿ ಪಥಕ್ಕಾಧಾರ ವಾಗುವಾ ಮುಕ್ತಾತ್ಮನೆಮ್ಮ ಕುಮಾರನೆಂದೆನುತ ನಿಮ್ಮಪ್ಪಾಜಿ ಭಾಗ್ಯದಾ ನಗುವ ನಕ್ಕಿದ್ದು–ಇಂದು ಭವದ ಕಂಟಕವಾಯ್ತೆ ಕಂಡಾ....

ಮಹಾವೀರ—(ಸೌಮ್ಯದಿಂದ) .... ತಾಯೇ ! ತಳಮಳಗೊಳ್ಳ ದಿರವ್ವ ! ತನು'ಮೋಹವಿದು ತಾರತಮ್ಯ ತೋರುತಿದೆ, ಆರಿಗಾರ ನೆರವು ಬಾರದು ತಾಯೆ; ಕರ್ಮ ಕರೆದಾ ದಾರಿಯೊಳು ನಿಂತಿರುವ ನಮಗೆ ನೆಮ್ಮದಿಯೆಂದಿಗಿಲ್ಲವ್ವ ಕಾರಣವನೆಸೆಯದಲೆ ಬರಿದೆ ಕಣ್ಣೀರಿನಿಂ-ಕರ್ತವ್ಯ ಚ್ಯುತಿಯಮ್ಮ ! ಬರಿದೆ ಜೀವನವೆ ಮುದವೆಂದರಿದು-ಕರ್ಮಸಂಕಲೆಯ ತೊಡೆಯದಲೆ - ಮೂಢರಾಗುತಿಹೆವಮ್ಮ – ಅಮ್ಮಾ ! - ಜ್ಞಾನದುದಯ ವಾದಾಗ, ಆತ್ಮನಾ ಕರೆ ಬಂದಾಗ ಬಾಹಿರರಾದೊಡೆಂತಮ್ಮ ?....

ತ್ರಿಶಲಾ—ಆಗದು ಕುಮಾರ !.... ಎನ್ನ ಮನ ಭಗ್ನವಾಗುತಿದೆ ಕಂದಾ !—ಹೆತ್ತೊಡಲ ಕರುಣೆ ಕತ್ತಿಗೂ ಉಂಟೆಂಬುದನರಿಯೆಯಾ ? ಎತ್ತಲೆತ್ತಲ ನೀತಿಯ ನೀನಿಂದು ಬಿತ್ತರಿಸೆ...ನಿನ್ನ ಬಿಟ್ಟಿರಲಾರದೆನ್ನ ಚಿತ್ತ ಕುಮಾರ.

ಹೆತ್ತಮ್ಮನಾ ಚಿತ್ತ ವಿಕಲ್ಪಮಾಡದಿರು—ನಿನಗೆ ಹತ್ತು ಜನು ಮದಾ ಜ್ಞಾನಕ್ಕೆ ಉತ್ತಮ ಸಮಯ ಬಂದೀತು—ಇಂದೆನೆಗೆ ನೀಂ ಇತ್ತಲೆ ಇರುವ ವಚನವಿತ್ತುದಾದರೆ....

ಮಹಾವೀರ—(ಸ್ಥಿರತೆಯಿಂದ)....ಹೇ ತಾಯೆ ! ಬರಿದೆ ದುಃಖಿ ಸದಿರು....ಜೀವಿಗಳ ದೇಹ ತಾ ಸತ್ತು ಬಿದ್ದಾಗ - ನೋಯುವರತ್ತ.... ಆಜೀವ ವೆದ್ದೆಂದಾದರೂ ಅಭಯ ವಚನವಿತ್ತ ವೇ ತಾಯೆ ?

ಮುದ್ದು ಶಿಶುಗಳು ಸತ್ತಾಗ - ಹೆತ್ತೊಡಲ ಕರೆಗೆ ಕಿವಿಗೊಟ್ಟ ವೇನಮ ?

ಮುದಿತನವು ಬಂದಾಗ ಬಾಳ್ವೆಯಲಿ ಎದೆತನವು ಬಂದಿರುವು ದಾರಿಗಮ್ಮ?

ಪಶು ತನ್ನ ಶಿಶುವ ಲಾಲಿಸಿ...ಅದು ಎತ್ತಾಗಲ್ ಹೆತ್ತತಾಯಿಯ ಯನೆ ಮುತ್ತುವುದಮ್ಮ ಭ್ರಾಂತಿಯಿಂದೆ, ಎತ್ತಲಾದುದೌ ತಾಯೆ?— ಈ ಬಾಳ್ನರಕ....

....ತಿಳಿದವರು ತಿಳಿಯದವರ ತರಿದು ತಿನ್ನುವುದೇ ತಾರಕ ಧರ್ಮವೆನುವಾ ಈ ತಿಳಿಗೇಡಿಗಳ ಕೂಟದೊಳು....ಹೆಣ್ಣು ಹೊನ್ನು ಮಣ್ಣುಗಳಾಸೆಯಲಿ-ಅಣ್ಣ ತಮ್ಮನನು ಅಡ್ಡಾಡ ಬಾಳಿನೊಳು, ಮಗನು ತಂದೆಯನು ಮುತ್ತಿಕೊಂಡಾ ಮೇಳದೊಳು, ನಾರಿ ಧರ್ಮವನು ಸೆಳೆ ದಾಡುತಿರುವಾ ಕಾಳಗ ಕಾಂಡದೊಳು.....ಹಸಿವು, ನೀರಡಿಕೆ, ವಿಶ್ರಾಂತಿ ಗಳ ತೃಪ್ತಿಯಲಿ....ಅಂತೆಯೆ....ಬಳಲಿದ ಜೀವಿಗಳ ಜೀವನವ ಜೂಜಿ ನಂದದಿ ತರಿದು .... ಸುಖ-ಸುಖವೆನುವ ಮತಿಗೆಟ್ಟವರ ಮಧ್ಯವಿರೆ ನಾನೊಲ್ಲೆನಮ್ಮ—!!!

ತಾಯಾರು? ಮಗನಾರು? ಬಂಧುವಾರು ತಾಯೆ? ಮೋಹ ಮಾಯೆಯೊಳು - ದೇಹ ಸಂಬಂಧವಿದು ತಾಯೆ ಜ್ಞಾನಮಾರ್ಗದೊಳು ನೋಡೆ ಈ ಸಾಧನವೆಲ್ಲ ಕರ್ಮದಾ ಬಾಧೆಯಮ್ಮ

ದಾರಿ ತೋರಿದ ಜ್ಞಾನ ಭಾಸ್ಕರರಂದು ತೀರ್ಥಂಕರರು ಇದ ಸುಳಿದು ಪೋಗಿ ತಪವೆಸಗಿ—ಕರ್ಮಗಳನೀಡಾಡಿ ನಿಂತರಮ್ಮ ಸಿದ ಶಿಲೆಯೊಳು ನಿತ್ಯಾನಂದಮಯರಾಗಿ......

ತ್ರಿಶಲಾ—(ನಿರಾಶೆಯಿಂದ)....ಕುಮಾರ - ನೀನು ಜಿನೇಂದ್ರನವ್ಧ ನಮ್ಮ ತಾರನಂತಿರುವೆಯೆಪ್ಪ— ಅರಸುತನವೇನು, ಈ ತ್ರಿಲೋಕ ಜ್ಞಾನ ಸಿಧಿಯದು ನಿನಗೆ ಸರಿಸಾಟಿಯೇ ಕುಮಾರ?

ಮಹಾವೀರ— ಎಲ್ಲವೂ ನಿನ್ನುಪದೇಶದಾ ಭಾಗ್ಯ, ತಾಯೇ ಹರಸವ್ವ !

ತ್ರಿಶಲಾ—ಆದರೊಂದಾಸೆ ಕುಮಾರ, ಇನ್ನೆರಡು ವರುಷಗಳು ತಡೆದು ಪೋಗಲಾರೆಯಾ? (ದೈನ್ಯದಿಂದ) ಕಟ್ಟಕಡೆಯಾಸೆ ಸುಪುತ್ರನಂ ಪೆತ್ತ ವೀರಮಾತೆಯ ಕರುಳಾಸೆ ಕಂದಾ! ಜ್ಞಾನ ನಿಧಿಗೆ ಪಾಲಿರೆದಾ ತಾಯಾಸೆ....ಕುಮಾರ ಕರುಣಿಸಲಾರೆಯಾ ತಾಯಿ ಕೂಗನು ?

ಮಹಾವೀರ—ತಾಯೆ ! ಆಸೆಗಳ ತೊರೆದು ಲೇಸಾದ ಮುಕ್ತಿಯ ಸಾರಿಸಿದ ಜಿನೇಂದ್ರನ ಧ್ಯಾನ ಮಾಡವ್ವ! ನಿನ್ನ ಮನದರಿಕೆಯನು ಅವನ ಪಾದದಲಿರಿಸು,....ಮನ ತಿಳಿಯಾಗುವುದು, ಮೌಢ್ಯವಳಿಯುವುದು, ಮೋಹ ನಾಶವಾಗುವುದು....ಮೋಡಗಳು ಚದುರಿ ರವಿಬೆಳಗಲೆಡೆ ಯಾದಂತೆ !

ತ್ರಿಶಲಾ— (ಸಮಾಧಾನದಿಂದ) .... ದೀರ್ಘಾಯುಷ್ಯ ಪೊಂದು ಕುಮಾರ! ತ್ರಿಲೋಕ ಜ್ಞಾನಿಯಾಗುಸರ್ವ ಜೀವೋದ್ಧಾರಕನಾಗು-!!

[ಸೇವಕನೊಬ್ಬನ ಪ್ರವೇಶ]

ಸೇವಕ—(ವಂದಿಸಿ)....ಮಹಾ ಪ್ರಭುಗಳ ಅಪ್ಪಣೆಯಾಗಿದೆ.

ತ್ರಿಶಲಾ—ಇಗೋ ಬಂದೆ.....ಕುಮಾರ !

ಮಹಾವೀರ—ಹೋಗಿ ಬಾ ತಾಯೆ....ನಿಶ್ಚಿಂತೆಯಿಂದಿರವ್ವ!

(ತ್ರಿಶಲಾದೇವಿ ತೆರಳುವಳು)

ಮಹಾವೀರ—(ಸ್ವಗತ)....ಹೇ ಪಾರ್ಶ್ವನಾಥ ತೀರ್ಥಂಕರನೇ!

ಅಗಲಿಕೆಗೆ ಅಂಜದಿದ್ದೆ! ಕಮಟನ ಆರ್ಭಟಕೆ
ಅಂಜದಿದ್ದೆ! ಅನಂತ ವಿಪತ್ತಿಗೆ ಅಂಜದಿದ್ದೆ!
ಆತ್ಮ ಧ್ಯಾನವೇ ಅನರ್ಘ್ಯ ನಿಧಿಯೆಂದು,
ಅನಂತಸುಖಕಧಿಪತಿಯಾದೆ ! ....

ಮುಕ್ತಾತ್ಮ - ಮಹಾತ್ಯಾಗಿ - ನೀಂ ಧನ್ಯನಲ್ತೆ ನಿನ್ನ ಕೆಚ್ಚೆದೆ! ನಿನ್ನ ಅಮರತ್ಯಾಗವೆ! ನಿನ್ನ ಕರುಣಾಮಯ ಬಾಳ್ವೆಯೆ! ಎನಗೆ ಮಾರ್ಗದರ್ಶನ ಮಾಡಲಿ....

—ತೆರೆ ಬೀಳುವದು—

ದೃಶ್ಯ ೬

ವನಾಂತರದ ಸೀನು—ಮಹಾವೀರ ಮತ್ತು ಸಾರಥಿ ಬಾವುಜ ಬಹುದೂರ ರಥದಿಂದ ಬಂದಿದ್ದಾರೆ....ರಥವನ್ನು ಒಂದೆಡೆ ಬಿಟ್ಟು—ಪ್ರವೇಶಿಸುವರು

ಬಾವುಜ— ದೊರೆಯೇ, ಈಗೇಕೆ ವನಾಂತರದ ವಿಹಾರ? ಮಟ್ಟಮಟ್ಟ ಮಧ್ಯಾಹ್ನದೊಳು ಅವಸರದಿ ಕರೆದೊಯ್ದಿರೇಕೆನ್ನನು? ಅರಮನೆಯೊಳಲ್ಲಿ ವಿಶ್ರಾಂತಿಯಿಂದಿರುವ ಸಮಯದೊಳು ತಾವೇಕೆ ಇತ್ತ ಮನಮಾಡಿದಿರಿ—ಇನ್ನಾದರೂ ಪೇಳು ದೊರೆಯೇ....

ಮಹಾವೀರ—ಬಾವುಜ....ಅವಸರದ ವಿಚಾರ ಬಂತು; ಆತುರ ಮಾಡಿದೆ. ಆತಂಕಗೊಂಡೆಯಾ ಸೋದರನೆ?....ಮನ್ನಿಸು ಬಾವುಜಾ.... ನೀನಿನ್ನು ಪೋಗಿ ಬಾ....ನಾನಿಂತೆ ಈ ತೆರದೆ—ಈ ಅರಣ್ಯದೊಳೆ ಆತ್ಮ ದರ್ಶನವನು ಪಡೆವೆ ನೀಂ ಪೋಗಿ ಬಾ....

ಬಾವುಜ—(ಆಶ್ಚರ್ಯದಿಂದ) ಇದೇನು ದೊರೆಯೇ? ಈ ವಿಪರೀತವೆನಗಿಂದು ಅಪಾರ್ಥಕ್ಕೆಡೆಗೊಡುತಿದೆ! ಎಲ್ಲರಂದು ಪೇಳಿದಂತೆಯೇ ನೀವಿಂದು ನಮ್ಮನಗಲುವಂತೆಯೇ ಕಾಣುತಿದೆ.....(ಸ್ವಗತ) ಛೀ! ದುರ್ವಿಧಿಯೆ!....ಆಗದಾಗದು....

ಮಹಾವೀರ—(ಮಂದಹಾಸದಿಂದ)....ಚಿಂತಿಸದಿರು ಬಾವುಜಾ-ಅಗಲಿಕೆಯ ಚಿಂತೆಯೇ ಜಗದ ಚಿಂತೆಯೊಳಗೆಲ್ಲ ಪಿರಿದಾದುದು.

ಎಂದೋ ಒಂದುದಿನ ಆ-ಚಿಂತೆಗೈಯ್ಯುವ ಹೊಣೆ ಹೊರಲು ಪುಟ್ಟುವರು ಚಿಂತೆಯಾ ಜೀವಿಗಳು......ಇಂದೇಕೆ ಚಿಂತಿಸುವೆ ಸೋದರನೆ–ಪೋಗಿ ಬಾ ನಿನಗೆ ಮಂಗಳಮಕ್ಕೆ....

ಬಾವುಜ—(ಗಾಬರಿಯಿಂದ)....ಇದೇನು ? ಅಯ್ಯೋ-ದೊರೆಯೇ ಮುಂದಿನ್ನು ಎಮಗಾರುಗತಿ ? ಹಿಂತಿರುಗಿ ನಾನೆಂತು ಮೊಗದೋರಲಿ? ಕೋಟಿ ಬಾಯ್ಗಳಿಗುತ್ತರಿಸೆ ಎನಗಿಂದು ಅರಿಯದಾಗಿದೆ ದೊರೆಯೇ? —ಆಗದು-ನಿನ್ನ ಹಾದಿಯೇ ಎನ್ನ ಗತಿಯಾಗಲಿ! ನಿನ್ನೊಡನೆ ಇರುವೆ-ನಿನ್ನೊಡನೆ ಅಮರನಾಗುವೆ....

ಮಹಾವೀರ—ಬೇಡ ! ಬೇಡ ಬಾವುಜಾ-ನೀಎನ್ನ ಸಂಗ ಬಿಡ ಲಾರದಾ ಮೋಹದೊಳು ಬಂದೆಯಾದೊಡೆ ದುಃಖವೆಡಬಿಡದು. ಮುಕ್ತಮನವಿಲ್ಲ ನಿನಗಿಂದು, ಒಂದು ದಿನ ನೀನೂ ಬರುವೆಯಂತೆ.... ನಾನು ಜ್ಞಾನವನು ಪಡೆದು ಬಂದಾಗ-ನಡೆ ಹಿಂದಕೀಗ ಸೋದರಾ!

ಬಾವುಜಾ—(ದುಃಖದಿಂದ)—ಹಾ-ವಿಧಿ-ಏನಮಾಡಿದೆ? ನೀನು (ವಿಕಾರವಶನಾಗಿ)....ಅಯ್ಯೋ!-ನಾನು ಮಾಡಿದುದೇನು? ನೋಡುವು ದೇನು ?....ದೊರೆಯುಮ್ಮನಗಲುತಿಹರೇ ! " ಜಿನ " " ಜಿನ"....

ಮಹಾವೀರ—(ಸಂತೈಸುವ ರೀತಿ)....ಬಾವುಜಾ-ಸೋದರನೆ— ಇಂದು ಈ ವೀರ ದಿನದಂದು-ಸಂತಸದಿ ನಡೆ—" ಜಿನ, ಜಿನ " ಎನುವ ದಿವ್ಯ ಮಂತ್ರವೇ ನಿನ್ನ ದಾರಿ ಕಾಯಲಿ! ನಿನ್ನ ಕರ್ತವ್ಯ ಕಾಯಲಿ ! ನಿನ್ನ ಕರ್ಮವನೆಲ್ಲ ಮರೆಮಾಡಲಿ !—ಇದ ಮರೆಯದಿರು ಸೋದರಾ-ಹಿಂದೊಮ್ಮೆ ಇದ ನೆನೆದುದರಿಂದೆ - ಇಂದೆಮಗೆ ಜ್ಞಾನ ಕರೆಯುತಿದೆ, ಧರ್ಮವೆಚ್ಚರಿಸುತಿದೆ, ವೈರಾಗ್ಯ ಸ್ವಾಗತಿಸುತಿದೆ - ಶಾಶ್ವತದ ಸುಖದ ಸನ್ನಿಧಿಗೆ....ಪೋಗಿ ಬಾ ಬಾವುಜಾ!—ಜಿನ ನಾಮ ಧರಿಸಿ ! ಜಿನಧರ್ಮ ಉದ್ಧರಿಸಿ ! ಜೀವನವ ಸಿಂಗರಿಸಿ ಬಾಳ್ವೆ, ಜೀವಿಗಳ ದಯೆಯಿಂದ

ನೋಡಿ....ಸದ್ಧರ್ಮವೃದ್ಧಿರಸ್ತು (ಆಶೀರ್ವದಿಸುತ್ತ) — (ತೆರಳುವನು)

ಬಾವುಜಾ—(ನಿಂತಲ್ಲೇ ನಿಂತು ಹುಚ್ಚು ಹಿಡಿದಂತೆ) .... ಜೈ ಜಿನೇಂದ್ರ !ಜೈ ಮಹಾವೀರ....!!

ತೆರೆಬೀಳುವುದು

ದೃಶ್ಯ ೭

[ಅರಣ್ಯದ ಸೀನು —ಒಂದು ಆಲದ ಮರದ ಬುಡದಲ್ಲಿ ಮಹಾವೀರ ವಿರಕ್ತಿ ಮುದ್ರೆಯಿಂದ ಕುಳಿತಿರುವನು-ಓರ್ವ ಹುಚ್ಚನ ಪ್ರವೇಶ]

ಹುಚ್ಚ— (ಸ್ವಲ್ಪದೂರದಿಂದಲೇ) — (ಸ್ವಗತ) (ವಿಕಾರವಾಗಿ ನಗುತ್ತಾ) ಆ ಹಾ ಹಾ....ನಾನೀ ವನದ ರಾಜ ! ಇದೇ ಎನ್ನ ರಾಜ್ಯ ! ನಾನೇ ಸಾರ್ವಭೌಮ ! ಅಸಹಾಯ ಶೂರ !—ಆಹಾ ಹಾ....

(ಪಕ್ಕಕ್ಕೆ ತಿರುಗಿ ನೋಡಿ)

....ಯಾರಿವನು?—ಸನ್ಯಾಸಿಯಂತಿರುವನು, ಇಲ್ಲಿ—ಈ ಶಾಂತ ರಾಜ್ಯದಲ್ಲೇಕೆ ಇವನ ಪ್ರವೇಶ ?

(ಉನ್ಮಾದದಿಂದ)....ಯಾರಾದರಿರಲಿ, ಎನ್ನಪ್ಪಣೆಯ ಮೀರಿ ದೋರ್ವ ಮಾನವ ಜಂತು !(ಹತ್ತಿರಕ್ಕೆ ಬರುತ್ತಾ)....ಎಲೇ ಸನ್ಯಾಸಿ....

(ಹಠಾತ್ತನೆ ಚಕಿತನಾಗಿ ತಲೆಯನ್ನು ಎರಡು ಕೈಗಳಿಂದಲೂ ಒತ್ತಿ ಹಿಡಿದು ಪರದಾಡುವನು)

—(ಜ್ಞಾನ ಬಂದಂತೆ)....ಹಾ ಯಾರೀತ ? ಅಯ್ಯೋ - ನಾನು ಕಟು ನುಡಿಗಳ ನುಡಿದೆ ! .... ಮಹಾನುಭಾವ ಕ್ಷಮೆದೋರು !— (ಶಿರ ಬಾಗುವನು)

ಮಹಾವೀರ....(ಎಚ್ಚೆತ್ತು)....ಬಾ ಸೋದರನೆ! ಭೀತಿ ಪಡಬೇಡ ನಾನಿನ್ನ ಬಂಧು (ತಲೆಯನ್ನು ನೇವರಿಸುವನು)

ಹುಚ್ಚ— (ಚೇತರಿಕೊಂಡವನಂತೆ)....ಮಹಾಮಹಿಮ....ತಾವು ಯಾರು?—ಎಲ್ಲಿಂದ ಬಂದಿರಿ?....ನಿಮ್ಮ ಸ್ಪರ್ಶ ಮಾತ್ರದಿಂದಲೇ— ಎನಗೀಗ ನವಚೈತನ್ಯ ತುಂಬುತಿದೆ-ನರನರಗಳು ಉತ್ಸಾಹಶಾಂತಿ ಯಿಂದ ಚಿಮ್ಮಿ ಚಿಮ್ಮಿ ಪುಟಗೊಳ್ಳುತಿಹುವು! ...... ಎಲ್ಲೆಲ್ಲೂ ಬೆಳಕೆ, ಸುತ್ತಲೂ ಶಾಂತಿಯೇ, ಎತ್ತಲೂ ಚೇತನವು ಮೈವೆತ್ತು ನಿಂತಿದೆ.... ಇದಾವ ಧಾರ್ಮಿಕ ದರ್ಶನದ ಭಾಗ್ಯ! ಇದಾವ ಜನ್ಮಾಂತರದ ಜ್ಯೋತಿಯ ಸಂಗ ಸುಖ!!.....(ತೃಪ್ತಿಯಿಂದ)-ಹೌದು-ಮೂಢ ನಾನು!- ಓ ಪುಣ್ಯಾತ್ಮ - ನಿನ್ನ ದರ್ಶನದ ಭಾಗ್ಯ - ನಿನ್ನ ಸ್ಪರ್ಶನದ ಪುಣ್ಯ— ತಾವಾರು ತಿಳಿಯಬಹುದೇ?

ಮಹಾವೀರ—(ವಾತ್ಸಲ್ಯದಿಂದ)..ಸೋದರಾ, ಯಾರಾದರೇನಂತೆ? ಸಂಸಾರ ಮೋಹವನು ಬಿಟ್ಟುಳಿದು, ಶಾಶ್ವತ ಶಾಂತಿಯನು ಕೋರಿ ಬಂದ ನಾನೊಬ್ಬ ಸಾಧಕ—!

ಹುಚ್ಚ—ದಯಾಮಯನೆ! —ನಾಂ ತಿಳಿಯಲಿಚ್ಛಿಸುವೆ; ತಿಳಿಸ ಲಾರೆಯಾ ನಿನ್ನ ನಿಜ ನಾಮವನು?

ಮಹಾವೀರ—ಸೋದರಾ!—ನಾನೊಬ್ಬ ಯುವರಾಜನೆಂದು, ಮಹಾವೀರನೆಂದೆನ್ನ ಕರೆದರು—

ಹುಚ್ಚ—(ಆಶ್ಚರ್ಯದಿಂದ) .... ಹಾ - ಏನು - ಯುವರಾಜರೆ! ಮಹಾವೀರರೆ!.... ಪ್ರಭು — ಇಂತೇಕೆ ಎನ್ನಂತೆ ಕಾಡಿನೆಡೆಗೈದಿರಿ? ನಿಮಗಾವ ದುಃಖ ಕಾಡಿತು ಯುವರಾಜ?

ಮಹಾವೀರ—ಸೋದರಾ, ದುಃಖಬರುವುದು ದುಃಖ! ಅದು ಎಂದೋ ಬಂದಿತು, ಜಗದಿ ಜೀವಿಗಳು ಪುಟ್ಟಿದಂದೇ ಜೀವನವು ಕರ್ಮದಾ

ಸೋಗಿನೊಳು ಜಾಗೃತಿ ಕುಂದಿದೆ ಸೋದರಾ....ದುಃಖವೆನುವುದಂದೇ ಕಂಡು ಕಾಣದೆಲೆ ಕಾಡುತಿದೆ, ಜನ್ಮವೆತ್ತಲಿರುವ ಜೀವಿಗಳಿಗೆ ಬಿಡುಗಡೆ ಯೆಲ್ಲಿಹುದಪ್ಪ. ಅದರಿಂದೆ ನಾಂ ಜನ್ಮವೆತ್ತದಾ ಜೀವನ್ಮುಕ್ತ ಸಾಧನೆಯ ನರಸಿ ಬಂದಿಹೆನು ಸೋದರಾ—

ಹುಚ್ಚ—ಮಾತೆಪಿತರು, ಸತಿಸುತರುಗಳ ತೊರೆದು ಬಂದೆಯಾ ಯುವರಾಜ? ಅವರ ವಿರಹ ದುಃಖವದು ನಿನಗೆ ಶಾಶ್ವತದ ಶಾಂತಿಯ ನೆಂತು ತರುವುದು?

ಮಹಾವೀರ—ಸೋದರಾ, ಮೋಹದಲಿ ಮತಿಗೆಟ್ಟು ಮಿಣುಕು ಹುಳುವಿನಾ ಭ್ರಮೆಯಂತೆ ಕಂಡು ಕಾಣದೆ ಕಾಡಿಬಿಡದಾ ಕರ್ಮ ಬಂಧನದ ಋಣಾನುಬಂಧನಕೆ ಮನವಿತ್ತಲ್ಲಿ ಮುಂದಿನಾ ಮಾರ್ಗವೆಲ್ಲ ಬಯಲಪ್ಪ ವಿರಹದುಃಖಗಳು ಬಂದು ಕಾಡದಿರುವ ಜೀವಿಗಳು - ಜಗ ದೊಳು ಜನ್ಮವೆತ್ತಿ ತಾಂ ಸುಖಾಂತ ಜೀವನ ಪೊಂದಿಹರಾರಪ್ಪ? ಆವ ಯುಗವಪ್ಪ? ಒಂದೇ ಒಂದು ದೃಷ್ಟಾಂತವು ದೊರಕದಾ ಈ ವಿಚಾರ ಹೀನ ಬಾಳನ್ನೇಕೆ-ನೆನೆ ನೆನೆದು-ದುಃಖಿಸಬೇಕು ಸೋದರಾ?

ಹುಚ್ಚ—ಇದ್ದವರನಗಲಿ-ಮುದ್ದಾದ ಮನದಿಂದ ಬಂದೆಯೆಂತು ಯುವರಾಜ? ಇದ್ದು ಸತ್ತುಹೋದೆನ್ನ ಮಡದಿ ಮಕ್ಕಳನಗಲಿಕೆಯ ವೇದನೆಯ ಸಹಿಸಲಾಗದೆ ಈ ಬಿಡುಗಾಡಿನೊಳು ದಿಕ್ಕೆಟ್ಟು ಅಲೆ ದಿಹೆನು....

ಮಹಾವೀರ—ನೀ ಎನಗಿಂತ ಸುಖಿಯಪ್ಪ.....

ಹುಚ್ಚ—(ಆಶ್ಚರ್ಯದಿಂದ)....ಎನ್ನ ವಿರಹವೇದನೆಯ ದುಃಖ ವದು ನಿನಗೆ ಸುಖವೆಂತಾದುದು ಯುವರಾಜ?

ಮಹಾವೀರ—ಸೋದರಾ, ... ಅಗಲುವಿಕೆಯೆಂಬುದೇ ಜಗದ ಜೀವಿಗಳ ಬಗಲಿನೊಳಿರುವ ಕ್ರೂರಕರ್ಮದಾ ವಿಷಗಂಟಪ್ಪ! ಅಗಲು

ವಿಕೆಯಲಿ ಇಂದು ನಿನ್ನವರು ಮುಂದಾದರಷ್ಟೆ, ನೀನು ಹಿಂದಾದೆ; ಕೂಡಿದವರೊಂದು ದಿನ ಅಗಲಲೇ ಬೇಕು ಸೋದರ !–ಅಗಲಿ ಮತ್ತೆ ಮರು ಜನುಮದಲಿ ಕೂಡುತಿರಬೇಕು, ಇದೇ ಕರ್ಮ ಸಿದ್ಧಾಂತ. ಇಂದಗಲಿದ ನಿನ್ನ ಸತಿಸುತರು ಮುಂದೆ ಕೂಡುವರೊಂದು ಮೋಹ ಬಂಧದಲಿ, ನನ್ನವರೆನುವಾ ಮರುಳು ಜ್ಞಾನದಲಿ—ಸಹಸ್ರಾರು ಜನುಮದಾ ಈ ಗೊಂಡಲದ ಹಾಳು ಹಣೇ ಬರಹದ ಹೊಣೆಗಾರರಾಗಿ ದುಃಖಪಡುತಿಹೆವಪ್ಪ ! ಅಗಲುವಿಕೆಯ "ಅವಧಿ" ಯೆಂಬ ಕರ್ಮನೆಲೆಯನರಿಯದಲೆ ನಮಗೆ "ದುಃಖ" ಅದೇ ವಿರಹ, ಅದು ನಿನಗಿಂದು ಜೀವಂತವಿಲ್ಲ ಮಿತ್ರ, ಅದಕಾಗಿ ನೀಂ ಸುಖಿ !....

ಹುಚ್ಚ—ದುಃಖವೆನಗಿನ್ನೂ ಬಿಡದಲ್ಲ ಯುವರಾಜ ?

ಮಹಾವೀರ— ದುಃಖಪಡುವನು ನಿನ್ನಾತ್ಮ ಸೋದರ—ನಿನ್ನ ಬರಿ ಮಾಂಸ ಮುದ್ದೆಯಾ ದೇಹವೇನು ಬಲ್ಲುದಪ್ಪ! ದುಃಖವೆನುವಾ ಕರ್ಮಶತ್ರುವನು—ಆ ಆತ್ಮ ಬಹು ಜನುಮಗಳ ಕಳೆದಿದ್ದೆ ಮಿತ್ರ ಈ ದುಃಖ ಶತ್ರುವಿನೊಳು ಹೋರಾಡಿ-ಹೋರಾಡಿ ತಾಂ ದುಃಖಿಯೇ ಆಗಿದೆ ... ಗೆದ್ದಗೆಲುವಿನ ಸುಖಪೊಂದುವುದು ಈ ಬತ್ತಿ ಬಾಡುವ ದೇಹದೊಂದಿಗೆ ಊರ್ಜಿತಗೊಳ್ಳುವದೇ ಸೋದರ !— ಇಲ್ಲ - ಸುಖ - ಸುಖವೆಂದು ಹೋರಾಡಿ—ಆ ಹೋರಾಟ – ಬಿಟ್ಟ ದೇಹವನು ಬಿಡುವುದು ಮತ್ತೆ ದೊರುವುದು ಮತ್ತೊಂದು ದೇಹವನು–ಅದನರಿಯದಲೆ - ಈ ಸತ್ತು ಸಾಯುತಿರುವಾ ಜಡ ದೇಹ ನಂಬಿ ನಾಶವಾಗು ತಿಹೆವಪ್ಪ....

ಹುಚ್ಚ—ಇದಕೊಂದು ದಾರಿತೋರುವೆಯಾ ದಯಾನಿಧೇ !

ಮಹಾವೀರ—ಆತ್ಮಧ್ಯಾನದಿ ಮನವ ನಿಲಿಸು! ಆತ್ಮನನೇ ಕಾಣು ವಾಸೆಯಲಿ, ಆತ್ಮನಿರಿವಿನಾಶೋಧನೆಯೊಳೆ, ಆತ್ಮನಾ ಪ್ರಕೃತಸ್ಥಿತಿಯ ನರಿಯುವಾ ಮನದೊಳೆ...... ವೇಳೆ ಕಳೆಯುವನಾಗು ಸೋದರಾ!.... ಆ

ಕಳೆಯುವಾ ವೇಳೆಯೊಳು ಶ್ರೀ ಜಿನರ ಜೀವಾಮೃತ ವಚನಗಳ ಪಾಲಿಸು. ನಿನ್ನಾತ್ಮಸೊಂದು ದಿನ ತನ್ನತನವ ತಾನೇ ತೋರುವನು-ಆ ದಿನಕಾಗಿ ಕಾಯ್ದಿರು - ಅಂದೇ ಅರಿವು, ಅಂದೇ ಆನಂದದ ಪರಾಕಾಷ್ಠತೆ! ಅಂದೇ ಶಾಶ್ವತದ ಸುಖ ಶಾಂತಿಯೊಳಿಂದಾದ ತ್ರಿಕಾಲ ಜ್ಞಾನದರಿವಿನ ಪ್ರಕಾಶ—ಮಿತ್ರ....

ಹುಚ್ಚ—ಶ್ರೀ ಜಿನರ ಧ್ಯಾನವನೆಂತು ಗೈಯ್ಯಲಿ? ಪ್ರಭು

ಮಹಾವೀರ— (ತದೇಕ ಚಿತ್ತದಿಂದ)....

ಓಂ ಣಮೋ ಅರಹಂತಾಣಂ

ಓಂ ಣಮೋ ಸಿದ್ಧಾಣಂ

ಓಂ ಣಮೋ ಆಇರಿಯಾಣಂ

ಓಂ ಣಮೋ ಉವಝೂಯಾಣಂ

ಓಂ ಣಮೋ ಲೋಯೆ ಸವ್ವಸಾಹೂಣಂ.

ಈ ಪಂಚಣಮೋಕಾರವನ್ನು ಸದಾ ನೆನೆಯುತಿರು ಸೋದರ! ಜಿನನ ಧ್ಯಾನಿಸು, ಆತ್ಮನನೇ ನೋಡು! ಅನ್ಯಗಳಲಿ ಅನಾಸಕ್ತಿ ವಹಿಸು....

ಹುಚ್ಚ—ಧನ್ಯನಾದೆ—ಮುನಿವರಾ! ಮಹಾವೀರ-ನಿಜ ಮಹಾವೀರ ನೀನಲ್ತೆ ಕರುಣಾನಿಧಿ!....

ನಿಜ ಚಿತ್ತದಲಿ ಧ್ಯಾನಿಪೆ ನೀನಿತ್ತ ದಿವ್ಯ ಮಂತ್ರಗಳನು....ನಾಂ ಸಾಧಿಸುವೆ, ನೀ ಸಾಧಿಸುವೆನೆಂದುದನೆ....

ಮಹಾವೀರ—ಕರ್ಮದೊತ್ತಡದೊಳೆಲ್ಲ ಸರ್ವ ಜೀವಿಗಳು ತಾಂ ಬಾಧ್ಯರೆಂದೋ ಆಯ್ತು-ಸುಖ-ದುಃಖ ಮೊತ್ತಗಳ ಗತಿಯನರಿಯದೆ-ಬರಿದೆ ವಿವಿಧ ಭ್ರಾಂತಿಯೊಳು ಜ್ಞಾನವದು ಜಾರುತಿದೆ-ಮೋಹದಾ

ತೃಪ್ತಿಯತ್ತ-ಇದು ಬಹಳ ಮಾತಿನದಲ್ಲ-ಬಹಳ ದೂರಿಲ್ಲ-ಜೀವದಯೆ ಧರ್ಮ — ಜೈಸುವ ಮನಬೇಕು — ಸೋದರ ಸರ್ವಸಮಾನತೆ ಇಲ್ಲಿಹುದು — ತುದಿ ಮೊದಲಿಂದ—ಸದ್ಧರ್ಮ ವೃದ್ಧಿರಸ್ತು ಪೋಗಿ ಬಾ ಸೋದರಾ!

ಹುಚ್ಚ—ಜೈ ಜಿನೇಂದ್ರ! ಜಯ ಜಯ ಮಹಾವೀರ ಪ್ರಭು !! ಜಯ ಜಯ! ಜೀವದಯಾ ಧರ್ಮ !!!

—ತೆರೆ ಬೀಳುವುದು—

ದೃಶ್ಯ ೮

[ಅರಣ್ಯದ ಸೀನು—ಮಹಾವೀರ ಧ್ಯಾನಾಸಕ್ತನಾಗಿ ಮರದ ಬಳಿ ಕುಳಿತಿರುತ್ತಾನೆ (ಕುಳಿತ ಸ್ಥಳ ಒಂದು ಅಡಿಯಾದರೂ ಎತ್ತರವಿರಬೇಕು] ಓರ್ವ ಕಳ್ಳನ ಪ್ರವೇಶ—

ಕಳ್ಳ—(ಸಲೀಸಾಗಿ ಬರುತ್ತಿದ್ದವನು ಹಠಾತ್ತನೆ ಮಹಾವೀರನನ್ನು ನೋಡಿ ನಿಲ್ಲುವನು)

(ಸ್ವಗತ)....ಯಾಠಲ್ಲಿ! ಯಾವನೋ ಸನ್ಯಾಸಿಯೊಬ್ಬ ಕುಳಿತು ಧ್ಯಾನಮಾಡುತ್ತಿರುವಂತಿದೆ, — ನೋಡಿದೊಡೆ ತೇಜಸ್ಸಿನಂತಿರುವನು ....(ಕೈ ಕಟ್ಟಿಕೊಂಡು)...ಇವನ ಬಳಿ ಹಣದ ಗಂಟಿರಬಹುದೆ?.... ಸನ್ಯಾಸಿಗಳನೇಕರ ಗಂಟನಿದುವರೆಗೆ ಹಾರಿಸಿರುವೆ, ಬೆದರಿಸಿನೋಡುವೆ! ....ಇರಲಿ....

(ಪ್ರಕಟ)....ಏ ಸನ್ಯಾಸಿ (ಹತ್ತಿರ ಬರುವನು)—ಬಿಡು ಕಣ್ಣ ಎಲ್ಲಿಟ್ಟಿರುವಿ ತಾ ಇಲ್ಲಿ.....ಹು....ಇಲ್ಲದಿರೆ ಕೊಲ್ಲುವೆನು....ಮಾತನಾಡಲೊಲ್ಲೆಯಾ—(ಎನ್ನುತ್ತಾ ಕತ್ತಿ ಎತ್ತುವನು).

(ಹಠಾತ್ತನೆ ಹುಚ್ಚನು ಏಕಾಏಕಿ ಆರ್ಭಟಿಸುತ್ತಾ ಬರುವನು.)

ಹುಚ್ಚ—(ಎತ್ತರ ಧ್ವನಿಯಲ್ಲಿ)....ಎಲವೋ ಧೂರ್ತ! ತಡೆ ತಡೆ ಎನ್ನ ಗುರುವನನು ಘಾತಿಸಬಂದೆಯಾ?...ಅಧಮಾ, ತೊಲಗಿಲ್ಲಿಂದ....ಇಲ್ಲದಿರೆ ನಿನ್ನ ಪುಡಿ ಪುಡಿಗೊಳಿಸೇನು-(ಎನ್ನುತ್ತಾ ಹತ್ತಿರವಿದ್ದ ಒಂದು ಕಲ್ಲು ಗುಂಡನ್ನು ಎತ್ತಿಕೊಂಡು ನಿಲ್ಲುವನು)

(ಕಳ್ಳ ಅವನ ಕಡೆ ತಿರುಗಿ ಕತ್ತಿ ಮೇಲೆತ್ತಿ)

ಕಳ್ಳ—ಎಲಲೆ ಕುನ್ನಿ! ಒಂದೇ ಏಟಿಗೆ ನಿನ್ನ ರುಂಡ ಕೆಳಗಿಳಿಸೇನು—ಕಲ್ಲನೊಗೆಯೋ!

[ಆ ಸಮಯಕ್ಕೆ ಘಟಸರ್ಪವೊಂದು ಕಳ್ಳನಹಿಂದೆ ಹೆಡೆಯೆತ್ತಿ ಮುಂದಾಗುವುದು ಇನ್ನೇನು ಕಚ್ಚಬೇಕೆನ್ನುವುದರಲ್ಲಿ-ಮಹಾವೀರ ಕಣ್ಣು ತೆರೆಯುುವನು-ಮತ್ತು ಕೂಡಲೇ ಮೇಲೆದ್ದು]

ಮಹಾವೀರ—(ಸರ್ಪಕ್ಕೆ) ನಿಲ್ಲು, ಬಿಡು, ಕೊಲುಭಾವವನು-ಓ ಘಟಸರ್ಪನೇ-ಶಾಂತನಾಗು-! ಶಾಂತನಾಗು!

[ಎನ್ನುತ್ತಾ ಅದರ ಮೇಲೆ ತನ್ನ ಮೃದು ಹಸ್ತವನ್ನಾಡಿಸುವನು-ಬೆಳಕು ಹರಿದಂತಾಗುವುದು – ಕಳ್ಳ - ಹುಚ್ಚ ಇಬ್ಬರು ಇದ್ದಂತೆಯೇ ಇದ್ದು - ಬೆರಗಾಗಿ—ನೋಡುವರು—ಸರ್ಪಹೆಡೆಯನ್ನು ಮುಚ್ಚಿ - ಮಹಾವೀರನ ಪಾದದ ಬಳಿ ತೆಕ್ಕೆ ಬೀಳುವುದು]

ಮಹಾವೀರ—ಸರ್ಪನೇ!-ನೀ ಹಿಂದೆ ಕೊಂದ ಕರ್ಮದಿಂದಲೇ ಕೊಲ್ಲುವ ಭಾವವಿದ್ದುದರಿಂದಲೇ ಇಂದು ಸರ್ಪದಾ ಜನ್ಮ ತಾಳಿರುವೆ. ಮತ್ತೆ ಕೊಲುವೆಭಾವದಿಂದಲೆ -- ಕೊಲ್ಲುವೆಯಾದರೆ - ಅತಿಕೀಳಾದ ಜನುಮವನು ಹೊತ್ತು-ಅನಂತಕಾಲವನು ದುಃಖದೊಳೇ ಕಳೆಯುವೆ! ನಿನಗೆ ಆತ್ಮದರ್ಶನವಾಗಲಿ! ನಿನ್ನ ಕಠಿಣಗುಣ ನಾಶವಾಗಲಿ! ಪೂರ್ವಸ್ಮರಣೆ ಹೊಂದು ಸರ್ಪ ಸೋದರನೆ!....ಸದ್ಧರ್ಮವೃದ್ಧಿರಸ್ತು-(ಆಶೀರ್ವದಿಸುವರು.)

(ಸರ್ಪವು ಮೇಲಕ್ಕೆದ್ದು—ಕಳ್ಳನ ಪಾದದಲ್ಲಿ ಬಿದ್ದು—ಮತ್ತೆ ಮಹಾವೀರನ) ಪಾದ ಸೇರುವುದು.

[ಕಳ್ಳನು ಕತ್ತಿಯನ್ನು ಕೆಳಗೆ ಬಿಸಾಡುವನು, ಹುಚ್ಚನ ಕಲ್ಲು ಕೈಯಿಂದ ಜಾರುವುದು—ಕಳ್ಳನು-ಹುಚ್ಚನು ಪರಸ್ಪರ ಆಲಿಂಗಿಸುವರು—ಇಬ್ಬರೂ ಮಹಾವೀರನ ಎಡಬಲಗಳಲ್ಲಿ ನಿಲ್ಲುವರು]

ಕಳ್ಳ—(ಸಾಷ್ಟಾಂಗಮಾಡಿ) .... (ನಿರ್ವಿಕಾರ ಭಾವದಿಂದ)—ಓ ಮಹಾನುಭಾವ ! ಮನ್ನಿಸಿ ಕೃಪೆದೋರೈತಂದೆ (ಎದ್ದು) ....ನಿನ್ನನಾ ಕೊಲ್ಲ ಬಂದೆ--ಛೀ-ಹೇಡಿಯಂತೆ !-ಆದರೆ-ಆದರೆ-ದಯಾನಿಧಿ-ಆ ವಿಷ ಜಂತುವಿಗೂ ಕೊಲಬೇಡೆಂಬ ನೀತಿಯ-ಜ್ಞಾನವನಿತ್ತೆ-ಆ ಸರ್ಪವಿಂದು ಬದುಕಿದದು-ನಿನ್ನ ಕರುಣೆಯಿಂದ! ನಿನ್ನ ದಯಾಧರ್ಮದಿಂದ! ಈ ಮೂರು ಜೀವಿಗಳನು ಮುಕ್ತಮಾಡಿತು - ವೈರಭಾವದಿಂದ ..... ನಿನ್ನ ದಯೆಗಿಂತ ಮಿಗಿಲಾದ ದಯಾ ಧರ್ಮವನಿದುವರೆಗೆ ನಾಂ ಕಂಡುದಿಲ್ಲ ಮಹಾಮಹಿಮ .....

ಹುಚ್ಚ—ಸೋದರ, ಇವರು ಯುವರಾಜ ಮಹಾವೀರರು !!

ಕಳ್ಳ.....ಹಾ !—ಯುವರಾಜರೆ - ಪ್ರತ್ಯಕ್ಷ ಅವರೇ (ದಿಗ್ಭ್ರಮೆ)

ಮಹಾವೀರ--ಭಯಪಡದಿರು ಸೋದರಾ-ನಾವೆಲ್ಲ ಸೋದರರೆ ಆದರೆ ನಿಮ್ಮಿರ್ವರ ಮತ್ತು ಈ ಸರ್ಪದಿಂ ಮೂರ್ವರೊಳಗೆ ವೈರ ಭಾವವಿತ್ತು - ಅದೇ ನಮ್ಮ ನಿಜತನವನು ಮರೆಮಾಚಿತ್ತು,—ಈಗೆಲ್ಲ ಬಯಲಾದುದು. ನಿಮಗೆಲ್ಲ ಜ್ಞಾನದುದಯವಾಗಲಿ ಸೋದರರೆ.....

ಕಳ್ಳ—ಪ್ರಭು....ಮಹಾವೀರ !.... ಬಾಯಿರುವುದು ಹೊಗಳಿಕೆಗೆ. ತೆಗಳಿಕೆಗೆ,....ಹೊಗಳಿದೆಷ್ಟು ಇದುವರೆಗೆ ಯೆನ್ನ ಕೃತ್ಯದೊಳನುಪಾದವ ರೆಲ್ಲರನು ; ಎನ್ನದಾರಿಗಡ್ಡ ಬಂದ ಶತ್ರುಗಳ ನಿಗ್ರಹಿಸೆ, ದಾರಿತೋರಿ

ದವರನೆಲ್ಲ ಹೊಗಳಿದೆನು ಅವರೇ ಪೂಜ್ಯರೆಂದೆನು....ಮೂಢ ತನದಿಂದ, ಜೀವಗಳೆಲ್ಲವುಗಳಲಿ ಬದುಕುವಾ ಆಸೆ ಎಮ್ಮಂತೆ ಇದೆಯೆಂದ ತತ್ವ ವೊಂದರಡಿಯಲಿ—ನಾನಿದುವರೆಗೆ ಏನೊಂದ ಗೈಯ್ಯಲಿಲ್ಲವು ಪ್ರಭು !.. ಕಾಮಾಂಧನಾದೆ, ಧನಾಂಧನಾದೆ, ರಕ್ಕಸನಾದೆ....ನೂರು ದೇವರುಗಳಲಿ ಬರಿದೆ–ಯಾಚಿಸಿದೆ ನೂರಾರು ಹೊನ್ನಗಳನಿತ್ತು—ಎಲ್ಲವೂ ಬೂದಿ ಯಲಿ ಹೋಮವಾಯ್ತು ಪ್ರಭು.

ಧರ್ಮಾಧರ್ಮವೆನುತ ಮರ್ಮದಲಿ ಜನರ ವಂಚನೆ ಗೈವ ಮಾತಿನಮಲ್ಲರನೆರಗೆರಗಿ ತೃಪ್ತಿಗೊಂಡೆನು - ಅಜ್ಞಾನಿಗಳ-ಸವಿನುಡಿಗೆ ಮರುಳಾದೆ, ಕೊಲೆ ಸುಲಿಗೆಯೊಳರ್ಜಿಸಿದ ಧನವನೆಲ್ಲ-ದಾನಗೈದೆ ನಾ ಕಪಟಗಳಿಗೆ.....ಹರಸಿದರೆನ್ನ-ಸುಖಶಾಂತಿ ಬರಲೆಂದು ! ಆದರೆ ಎನ್ನ ಕಟುಕತನ ನೀಗೆಂದು ಪೇಳಿದವರಿಲ್ಲ ಇದುವರೆಗೆ.....ಅಯ್ಯೋ! ಜನಕೆಲ್ಲ ಬೋಧಿಸುವ ಜಾಡಿನೊಳು ಜಯುವ ಸಾಧಿಸಿದರೇ ವಿನಃ—ಜನ ತಿಳಿದು ನಡೆಯುವಾ ಕೃತಿಯನೊಂದೆಸಗಲಿಲ್ಲವು ಪ್ರಭು ಆ ಮರುಳರು. ನನ್ನ ದಯಾಧರ್ಮವನು, ಮನವಾರೆ, ತನುವಾರೆ, ಕೃತಿಯಾರೆ ಕೈಗೂಡಿ ಸುವಾ-ಕರುಣನಿಧಿಯೋರ್ವನ ಧರಣಿಯೊಳಗಿನ್ನಾರ ನಾಂ ಕಂಡಿಲ್ಲ - ಕಣ್ಣಾರ ಕಂಡೆನಿಂದು, ನಿಜಜ್ಞಾನದಾ ಅರಿವನು ! ಮನಸಾರೆ ಸ್ವೀಕರಿಸುವೆ ನಿನ್ನ ವಚನವನು, ಬೆಸಸೆನಗೆ ಮುಕ್ತಿ ಸುಧಾ ಪಥವನು ಮಹಾವೀರ ಪ್ರಭುವೇ.

ಮಹಾವೀರ—ಸೋದರ ! ಯಾರ ನಿಮಿತ್ತವೂ ಯಾರೂ ಏನ ಮಾಡಲಾರರು, ನಿನ್ನ ಕರ್ಮವಿಂದು ಪರ್ಯಾಯಗೊಂಡಿತಷ್ಟೆ ಅದರಿಂದೆ ನಿನಗಿಂದು ಈ ಸಂಕೇತ ದೃಷ್ಟಿಯೊಳು ಜ್ಞಾನವುದಯಿಸಿತು ಸೋದರ...

ಈ ಘಟಸರ್ಪಕೂ ಇಂದು ಜ್ಞಾನ ಕೆರಳಿದೆ, ಪೂರ್ವಭವದಾ ನೆನಪುಮೂಡಿದೆ, ತನ್ನ ನಿಜನೆಲೆಯನರಿಯುತಿದೆ! ಅದರಿಂದೆ ನಿನ್ನ ಕ್ಷಮೆ

ಯಾಚಿಸಿತು, ಕ್ರೋಧವಂ ಬಿಟ್ಟು—ಮಲಗಿದೆ ನೋಡು ಮಾತನಾಡ ಲರಿಯದೆಲೆ, ವಿನಯತನ ತೋರುತಲಿ.

ಹುಚ್ಚ—ದಯಾನಿಧಿ! ಮನ್ನಿಸು—ಎನಗಿನ್ನು ಪೂರ್ವ ಗುಣ ಬಿಟ್ಟುದಿಲ್ಲ—ಅದರಿಂದ ಈ ಸೋದರನ ಮೇಲೇರಿದೆ ನಿನ್ನವಧಿಸಲು ಬಂದನೆಂಬ ಮರುಳುತನದಿಂದ.

ಮಹಾವೀರ—ವಧಿಸಲಾರು, ವಧಿಸಿದೊಡೇನು ಬಂತು, ಬಂದು ದಿರುವುದೇ? ಮತ್ತೆ ಕರ್ಮ ಬಂಧನದಿ ಸಿಲುಕಿ ಮರುಜನುಮದಾ ಹೊರೆಯ ಹೊರಲಿಕೆ ಇದೊಂದು ಮಾಯದಾ ಕ್ರೋಧ ಬಂತಪ್ಪ-ಅರಿವಿಂದ ನೋಡು ಸೋದರಾ!

ಜಗದ ಜೀವಿಗಳೆಲ್ಲ ಒಂದಲ್ಲ ಒಂದು ದಿನ ಬೇಧಭಾವದಿಂದಲಿ ತಮ್ಮ ನಿಜಾತ್ಮ ಭಾವವನು ಮರೆತು ಹುಟ್ಟು ಸಾವುಗಳಲ್ಲಿ ಸಿಕ್ಕಿನರಳುವ ರಪ್ಪ ಈ ಭೇಧದೊಳೆ ಅರಿವುಮಾಡುವಾ ಸಾಧನೆಯನೆಸಗಿ ಅದನೆಲ್ಲ ಜಗಕೆಬಿತ್ತಿ ಭೇದವಳಿಸಬೇಕಪ್ಪ

ಕಳ್ಳ....ಮಹಾನುಭಾವ—ಎನಗೊಂದು ದಾರಿತೋರುವೆಯಾ?

ಮಹಾವೀರ—ದಾರಿಯೊಂದೆ ಸೋದರಾ! — ನಿರುತ ಆತ್ಮ ಧ್ಯಾನವನು ಬಿಡದಿರು, ಮೌನದಲಿ ನಿನ್ನಾತ್ಮದರುಶನವನು ಬಯಸು! ಜೀವಿಗಳನೊಂದನು ನೋಯಿಸದಿರು! ಜೀವಿಗಳ ಜೀವ ತರುವುದಕೆ ನಿನಗಶಕ್ಯವೆಂದಾದ ಮೇಲಿನ್ನು—ಕೊಲ್ಲುವುದು - ಅದೊಂದು ಮಾನವ ಶಕ್ತಿಯ ಅಪವಿತ್ರತೆಯೊಂದಲ್ಲದೆ - ಅಧರ್ಮ ಸೋದರಾ!

ಸಿಕ್ಕಿದನುಂಡು ಜೀವಿಸು! ಆಸೆಯನು ತ್ಯಜಿಸು! ತ್ಯಾಗಕ್ಕೆ ಮನಚಾಚು! ದಯಾಧರ್ಮ ಶಾಸನವನು ಮನಸಾರೆ ಪಾಲಿಸು! ಸತ್ಯವನು ಸಲಹು! ಕ್ಷಮೆಯನೆಂದೂ ತೊರೆಯದಿರು! ಕರುಣೆಯೇ ನಿನ್ನ ಖಡ್ಗವಾಗಲಿ - ಆಯುಷ್ಯ ಕಳೆಯುವಾ ಅವಧಿಯೊಳು – ಸುಖ

ದುಃಖಗಳ ಒತ್ತಡಕೆ ಬೇಸರಿಸದಿರು! ಅನ್ಯರನು ಅದರ ನಿಮಿತ್ತ, ಕಾಡದಿರು! ಕರ್ಮದೊತ್ತಡವೆಂದು ತಿಳಿದು ಧ್ಯಾನ ಮಗ್ನನಾಗು! ವಿಚಾರ ಶೀಲ್ಲನ್ನಾಗು ಈ ಜನನ ಮರಣದಾ ಶೃಂಖಲೆಯಿಂದ ನೀಂ—ಮುಕ್ತನಾಗುವಿ ಸೋದರಾ - ಇದು ಸತ್ಯ ಧರ್ಮ! ಸನಾತನ ಧರ್ಮ! ಜನತಾ ಧರ್ಮ! ನಿನಗೆ ಮಂಗಳಮಕ್ಕೆ! ಸದ್ಧರ್ಮವೃದ್ಧಿರಸ್ತು!!!

ಕಳ್ಳ—ಧನ್ಯನಾದೆ—ಗುರುಶ್ರೇಷ್ಟ!

ಹುಚ್ಚ—ಜೈ ಮಹಾವೀರ—ಜಯಾ ಜಯ ಜೀವದಯಾಧರ್ಮ

ಕಳ್ಳ—ಅಹಿಂಸಾ ಪರಮೋಧರ್ಮಕೀ ಜೈ....!!!

ತೆರೆಬೀಳುವುದು



ರತ್ನತ್ರಯ ಪ್ರಕಟಣಾಲಯ

ಬೆಂಗಳೂರು

ಮಾನವನ ಹಸಿವಿಗೆ ಅನ್ನವು ಎಷ್ಟು ಮುಖ್ಯವಿರುವುದೋ-ಅಷ್ಟೇ
ನ ಹಸಿವಿಗೆ ಜ್ಞಾನವೂ ಅಗತ್ಯ. ಸಮ್ಯಗ್‌ದರ್ಶನ, ಜ್ಞಾನ, ಸಚ್ಚಾರಿತ್ರ್ಯ
ನೂರು ಗುಣಶೀಲಗಳಿಂದ ಮಾನವ ತನ್ನ ಜೀವನವನ್ನು ಪವಿತ್ರಗೊಳಿಸು
ನೆ. ಇದನ್ನು ತಿಳಿದುಕೊಳ್ಳಬೇಕಾದರೆ ಜೈನನೇ ಆಗಲಿ-ಇತರರೇ ಆಗಲೀ
ಂಗೆ ಧರ್ಮದ ಅಭ್ಯಾಸವೂ ಬೇಕೇ ಬೇಕು.

ಆದುದರಿಂದ ಧರ್ಮಸೇವೆಗೆ ಕಂಕಣಬದ್ಧವಾದ "ರತ್ನತ್ರಯ ಪ್ರಕಟ
ಲಯ"ದ ಪ್ರಕಾಶನ ಭಂಡಾರಕ್ಕೆ ನೀವೂ-ನಿಮ್ಮ ಇಷ್ಟ ಮಿತ್ರರೂ ಚಂದಾ
ರರಾಗಿ ನಿಮ್ಮ ಗ್ರಂಥಭಂಡಾರದ ಸದುಪಯೋಗ ಮಾಡಿಕೊಳ್ಳಿರಿ.

ವಾರ್ಷಿಕ ಚಂದಾ ಕೇವಲ ಐದು ರೂಪಾಯಿಗಳು ಮಾತ್ರ

ಉತ್ಕೃಷ್ಟ ಬರೆಹಗಾರರ ಕೃತಿಗಳಲ್ಲದೆ, ಹೊಸ ಲೇಖಕರಿಗೂ ಉತ್ತೇಜನ
ಕಲಾಗುವುದು.

ಅಲ್ಲದೆ ನಮ್ಮಲ್ಲಿ ಜೈನ ಸಾಹಿತ್ಯದ ವಿಷಯವಾಗಿ ಕನ್ನಡ, ಮರಾಠಿ,
ದಿ. ಇಂಗ್ಲೀಷಗಳಲ್ಲಿ ಪುಸ್ತಕಗಳೂ ಕೂಡ ಸವಲತ್ತಿನ ಬೆಲೆಯಲ್ಲಿ ಸಿಗುವವು.
ಚನಾಲಯಗಳಿಗೆ ಉಪಯೋಗವಾಗುವ ಎಲ್ಲ ತರದ, ಎಲ್ಲ ಲೇಖಕರ ಕನ್ನಡ
ಸ್ತಕಗಳೂ ಸಿಗುತ್ತವೆ.

ಇಂದೇ ಬರೆಯಿರಿ.

ವ್ಯವಸ್ಥಾಪಕರು :
ರತ್ನತ್ರಯ ಪ್ರಕಟಣಾಲಯ
ಲಾಲ್‌ಬಾಗ್ ರೋಡ್,
ಬೆಂಗಳೂರು-27.

ಶ್ರೀ ವೈ. ವಿ. ಪಾರ್ಶ್ವನಾಥರು ಜೈನ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿರುವರೆನ್ನುವುದಕ್ಕೆ "ಸನ್ಮತಿ" "ಗುರುದೇವ" "ವಿವೇಕಾಭ್ಯುದಯ" ಮೊದಲಾದ ಪತ್ರಿಕೆಗಳಲ್ಲಿ ಬರುತ್ತಿರುವ ಅವರ ಉತ್ಕೃಷ್ಟ ವಿಚಾರಭಂಡಾರವೇ ಸಾಕ್ಷಿ! ಅವರು ಬಲವಾದ ಲೇಖನಿಕಾರರೂ ಹೌದು-ಜನ ಸಮುದಾಯವನ್ನು ಆಕರ್ಷಿಸಬಲ್ಲ ಉತ್ತಮ ವಾಗ್ಮಿಗಳೂ ಹೌದು! ಜನ ಸಾಮಾನ್ಯರಿಂದ-ಪಂಡಿತರ ವರೆಗೆ ಅವರ ಕೈ ಚಾಚಿದೆ! ಅದಕ್ಕಾಗಿ ಇಗೋ, ಅವರ ಈ ಕೆಳಗಿನ ಕೃತಿಗಳನ್ನು ನೀವೂ ಓದಿ, ಅಭ್ಯಸಿಸಿ, ನಿಮ್ಮ ಜ್ಞಾನ ಸಂಪತ್ತನ್ನು ಬೆಳೆಸಿಕೊಳ್ಳಿ!

—ಪಿ. ವಿಜಯಕುಮಾರ್

ಶ್ರೀ ಪಾರ್ಶ್ವನಾಥ ವಚನಗಳು. ಜೈನ ಸಾಹಿತ್ಯಕ್ಕೆ
—1008 ವಚನಗಳು (ಪ್ರಥಮ ಕೊಡುಗೆ)

ಮಹಾಯಕ್ಷಿ ಪದ್ಮಾವತಿ
(ಕಾದಂಬರಿ)

ಮಾರಾಟಕ್ಕೆ ಸಿದ್ಧವಿರುವ ಪುಸ್ತಕಗಳು

ಮಹಾಜ್ಯೋತಿ ಮಹಾವೀರ
ರತ್ನಾಕರ
ಬಾಹ್ಯಾಂತರ

ವಿವರಗಳಿಗಾಗಿ ಬರೆಯಿರಿ:

ಶ್ರೀ ವೈ. ವಿ. ಪಾರ್ಶ್ವನಾಥ
ಸೂಲಿಬೆಲೆ
ಜಿ. ಬೆಂಗಳೂರು